ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
DAIRYADA DAARI NEWS PAPER
EMAIL : dairyadadaari@gmail.com ಸಂಪುಟ: 01 ಸಂಚಿಕೆ: 107
ಬೆಲೆ ರೂ : 2.00
ರಾಯಚೂರು
ಪುಟ: 4
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795 ಶುಕ್ರವಾರ: 03–04–2026

# ನಕಲಿ ಕ್ಲಿನಿಕ್‌ಗಳ ಮೇಲೆ ದಾಳಿ

## 18 ಎಫ್‌ಐಆರ್ ದಾಖಲು, 13 ಕ್ಲಿನಿಕ್ ಸೀಜ್

ಧೈರ್ಯದ ದಾರಿ

**ರಾಯಚೂರು:**ಜಿಲ್ಲೆಯಲ್ಲಿ ವೈದ್ಯರೆಂದು ಸುಳ್ಳು ಹೇಳಿ ಅಮಾಯಕ ಜನರಿಗೆ ಮೊಸ ಮಾಡಿ ಗೊತ್ತಿಲ್ಲದ ಔಷಧಿಗಳ ಮೂಲಕ ಚಿಕಿತ್ಸೆ ನೀಡುವುದನ್ನೆ ವೃತ್ತಿಯಾಗಿ ಮಾಡಿಕೊಂಡಿರುವ ನಕಲಿ ವೈದ್ಯರ ಕ್ಲಿನಿಕ್‌ಗಳ ಮೇಲೆ ಜಿಲ್ಲೆಯಾದ್ಯಂತ 31 ನಕಲಿ ವೈದ್ಯರ ವಿರುದ್ದ ದಾಳಿ ಮಾಡಿ 18 ನಕಲಿ ವೈದ್ಯರ ವಿರುದ್ಧ ಎಫ್‌ಐಆರ್ ದಾಖಲು ಹಾಗೂ 13 ಕ್ಲಿನಿಕ್ ಸೀಜ್ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ಸುರೇಂದ್ರಬಾಬು ಅವರು ತಿಳಿಸಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿಗಳ ಅವರ ಸೂಚನೆ ಮೇರೆಗೆ ಮತ್ತು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ, ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಇವರ ಮಾರ್ಗದರ್ಶನದಂತೆ ಜಿಲ್ಲೆಯಲ್ಲಿರುವ ನಕಲಿ ವೈದ್ಯರುಗಳ ವಿರುದ್ಧ ಕ್ರಮ ಕೈಗೊಳ್ಳಲು ಕಂದಾಯ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ಅಯುಷ್ಯ ಇಲಾಖೆ ಸೇರಿದಂತೆ ಜಿಲ್ಲಾ ಮತ್ತು ತಾಲೂಕ ಮಟ್ಟದ ಅಧಿಕಾರಿಗಳನ್ನು ಒಳಗೊಂಡ ಸಮಿತಿಗಳನ್ನು ರಚನೆ










ಮಾಡಿ ದಿನಾಂಕ: 01.04.2026ರಂದು ಏಕಾಕಾಲಕ್ಕೆ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳ ತಂಡವು ಸಕ್ರಿಯವಾಗಿ ಭಾಗವಹಿಸಿ ಈ ವಿಶೇಷ ಕಾರ್ಯಚರಣೆಯಲ್ಲಿ ವಿವಿಧ ಪ್ರದೇಶಗಳಲ್ಲಿ ಒಂದೇ ಸಮಯದಲ್ಲಿ ಅನಧಿಕೃತವಾಗಿ ಕ್ಲಿನಿಕ್ ನಡೆಸುತ್ತಿದ್ದ ನಕಲಿ ವೈದ್ಯರು ಹಾಗೂ ಕೆ.ಪಿ.ಎಂ.ಇ ಕಾಯ್ದೆ ಅಡಿಯಲ್ಲಿ ನೋಂದಣಿಯಾಗದ ಖಾಸಗಿ ಕ್ಲೀನಿಕ್‌ಗಳ ಮೇಲೆ ದಾಳಿ ನಡೆಸಲಾಯಿತು. ಈ ದಾಳಿಯಲ್ಲಿ ವೈದ್ಯಕೀಯ ಅರ್ಹತೆ ಇಲ್ಲದೆ ಕ್ಲಿನಿಕ್ ನಡೆಸುತ್ತಿದ್ದ ಹಲವಾರು ನಕಲಿ

2ನೇಪುಟಕ್ಕೆ

## ಎಲ್ಲಾ ರಾಜ್ಯಗಳಲ್ಲೂ ದ್ವಿಭಾಷಾ ಶಿಕ್ಷಣದ ವ್ಯವಸ್ಥೆ ಜಾರಿಯಲ್ಲಿದೆ : ಬಿಜೆಪಿಗೆ ಮಧು ಬಂಗಾರಪ್ಪ ತಿರುಗೇಟು



**ಬೆಂಗಳೂರು,ಏ.2–** ಎಲ್ಲಾ ರಾಜ್ಯದಲ್ಲೂ ದ್ವಿಭಾಷಾ ಶಿಕ್ಷಣದ ವ್ಯವಸ್ಥೆ ಜಾರಿಯಲ್ಲಿದೆ ಎಂದು ಶಾಲಾ ಶಿಕ್ಷಣ ಸಾಕ್ಷರತಾ ಶಿಕ್ಷಣ ಸಚಿವ ಮಧುಬಂಗಾರಪ್ಪ ಅವರು, ತೃತೀಯ ಭಾಷಾ ವಿಷಯಕ್ಕೆ ಅಂಕಗಳಿಗೆ ಬದಲಾಗಿ ಗ್ರೇಡ್ ನೀಡುವ ನಿರ್ಧಾರವನ್ನು ಸಮರ್ಥಿಸಿಕೊಂಡರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರಮೋದಿ ಅವರನ್ನು ಖುಷಿಪಡಿಸಲು ಬಿಜೆಪಿಯವರು ಹಿಂದಿ.. ಹಿಂದಿ

ಎಂದು ಪ್ರಮೋಟ್ ಮಾಡುತ್ತಿರುವುದು ಸರಿಯಲ್ಲ. ಎಲ್ಲಾ ಕಡೆಯು ಎರಡು ಭಾಷೆ ಮಾತ್ರ ಜಾರಿಯಲ್ಲಿದೆ ಎಂದರು.

ಗ್ರಾಮೀಣ ಭಾಗದಲ್ಲಿ ತೃತೀಯ ಭಾಷೆ ಹೇರಿಕೆಯಾಗಿದೆ. ಕೆಲವು ಕಡೆ ಕನ್ನಡ ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಕಲಿಯುತ್ತಿದ್ದಾರೆ. ನಮ ಕನ್ನಡಿಗರು ಹೊಟ್ಟೆಪಾಡಿಗಾಗಿ ಹಿಂದಿ ಬೋಧನೆ ಮಾಡುತ್ತಿದ್ದಾರೆ. ಅಂಥವರಿಗೆ ಯಾವುದೇ ಒತ್ತಡ ಆಗಬಾರದು. ಅಲ್ಲದೆ ಯಾವುದೇ ಭಾಷೆ ವಿರುದ್ಧ ನಾವಿಲ್ಲ. ಈಗ ತೆಗೆದುಕೊಂಡಿರುವ ನಿರ್ಧಾರ ಒಳ್ಳೆಯದು ಎಂಬುದನ್ನು ಮುಖ್ಯಮಂತ್ರಿಯವರು ಹೇಳಿದ್ದಾರೆಂದು ತಿಳಿಸಿದರು.

ಬಿಜೆಪಿಯವರು ಟೀಕೆಟಿಪ್ಪಣಿ ಮಾಡುತ್ತಾರೆಂದು ಉತ್ತರ ಕೊಡಲು ಆಗುವುದಿಲ್ಲ. ಮಾಜಿ ಮುಖ್ಯಮಂತ್ರಿ 2ನೇಪುಟಕ್ಕೆ

## ಕನ್ನಡದಲ್ಲಿ ರೈಲ್ವೆ ಪರೀಕ್ಷೆಗಳಿಗೆ ಒತ್ತು : ಕೇಂದ್ರ ಸಚಿವರ ಭೇಟಿ ಮಾಡಿದ ಸಂಸದ ಜಿ. ಕುಮಾರ ನಾಯಕ

**ಯಾದಗಿರಿ:ಏ.2:**ರಾಯಚೂರು–ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದರಾದ ಜಿ. ಕುಮಾರ ನಾಯಕ ಅವರು ಕೇಂದ್ರ ರೈಲ್ವೆ ಸಚಿವರಾದ ಅಶ್ವಿನ್ ವೈಷ್ಣವ್ ಅವರನ್ನು ನವದೆಹಲಿಯಲ್ಲಿ ಭೇಟಿ ಮಾಡಿ, ತಮ್ಮ ಕ್ಷೇತ್ರದ ಅಭಿವೃದ್ಧಿ ಹಾಗೂ ಯುವಜನರಿಗೆ ಉದ್ಯೋಗಾವಕಾಶ ಹೆಚ್ಚಿಸುವ ಉದ್ದೇಶದಿಂದ ಹಲವು ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಿದರು.

ಈ ವೇಳೆ ರೈಲ್ವೆ ನೇಮಕಾತಿ ಪರೀಕ್ಷೆಗಳನ್ನು ಕನ್ನಡ ಭಾಷೆಯಲ್ಲಿಯೂ ನಡೆಸುವಂತೆ ಅವರು ಆಗ್ರಹಿಸಿದರು. ರಾಜ್ಯದ ಸಾವಿರಾರು ಅಭ್ಯರ್ಥಿಗಳು ಭಾಷಾ ಅಡೆತಡೆ ಕಾರಣದಿಂದ ಅವಕಾಶ ಕಳೆದುಕೊಳ್ಳುತ್ತಿರುವುದನ್ನು ಗಮನಕ್ಕೆ ತಂದು, ಕನ್ನಡದಲ್ಲಿ ಪರೀಕ್ಷೆ ನಡೆಸಿದರೆ ಗ್ರಾಮೀಣ ಹಾಗೂ ಹಿಂದುಳಿದ ವರ್ಗದ ಯುವಕರಿಗೂ ಸಮಾನ ಅವಕಾಶ ದೊರೆಯಲಿದೆ ಎಂದು ವಿವರಿಸಿದರು.

ಇದಲ್ಲದೆ, ರಾಯಚೂರು ಪ್ರದೇಶದಲ್ಲಿ ಸರಕು ಸಾಗಣೆ ವ್ಯವಸ್ಥೆಯನ್ನು ಬಲಪಡಿಸಲು ಆಧುನಿಕ ಕಾರ್ಗೋ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದು ಸಂಸದರು ಅಭಿಪ್ರಾಯಪಟ್ಟರು. ಇದರಿಂದ ಕೈಗಾರಿಕೆ, ಕೃಷಿ ಉತ್ಪನ್ನಗಳ ರವಾನೆ ಹಾಗೂ ವ್ಯಾಪಾರ ಚಟುವಟಿಕೆಗಳಿಗೆ ವೇಗ ಸಿಗಲಿದೆ ಎಂದರು.

ಹಾಗೆಯೇ, ವಿಶಾಖಪಟ್ಟಣಂ–ಮಹೆಬೂಬ್‌ನಗರ ನಡುವಿನ



ರೈಲು ಸೇವೆಯನ್ನು ರಾಯಚೂರಿನವರೆಗೆ ವಿಸ್ತರಿಸುವಂತೆ ಹಾಗೂ ರೈಲು ಸಂಖ್ಯೆ 20953/20954 ಮತ್ತು 22689/22690 ರೈಲುಗಳನ್ನು ಅಬು ರೋಡ್ ತನಕ ವಿಸ್ತರಿಸುವ ಕುರಿತು ಸಹ ಅವರು ಮನವಿ ಸಲ್ಲಿಸಿದರು. ಈ ಕ್ರಮಗಳಿಂದ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯ ಒದಗುವ ಜೊತೆಗೆ ಪ್ರಾದೇಶಿಕ ಸಂಪರ್ಕತೆ ಮತ್ತಷ್ಟು ಬಲಪಡುತ್ತದೆ ಎಂದು ಸಂಸದರು ತಿಳಿಸಿದ್ದಾರೆ.

ಈ ಎಲ್ಲಾ ಬೇಡಿಕೆಗಳನ್ನು ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಸದರು ಸಚಿವರೊಂದಿಗೆ ಸುದೀರ್ಘವಾಗಿ ಚರ್ಚಿಸಿದ್ದು, ಸಮಸ್ಯೆಗಳ ಪರಿಹಾರಕ್ಕೆ ತ್ವರಿತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

## ಭಾರತಾಂಬೆಯ ಸೇವೆ ಸಲ್ಲಿಸಿ ಸ್ವಗ್ರಾಮಕ್ಕೆ ಮರಳುತ್ತಿರುವ ಯೋಧ ಮಲ್ಲಯ್ಯ ನಾಯಕ ಪೆದರೆಡ್ಡಿ ಅವರಿಗೆ ಅದ್ದೂರಿ ಸ್ವಾಗತಕ್ಕೆ ಸಿದ್ದತೆ

ಧೈರ್ಯದ ದಾರಿ

**ಮಾನ್ವಿ, ಏ. 2:** ದೇಶ ಸೇವೆ ಎಂದರೆ ಕೇವಲ ಕರ್ತವ್ಯವಲ್ಲ, ಅದು ಮಹಾನ್ ಧರ್ಮ. ಈ ಧರ್ಮವನ್ನು ನಿಷ್ಠೆಯಿಂದ ನೆರವೇರಿಸಿ, ಹಲವು ವರ್ಷಗಳ ಕಾಲ ದೇಶದ ಗಡಿಗಳನ್ನು ಕಾಪಾಡಿದ ಯೋಧ ಮಲ್ಲಯ್ಯ ನಾಯಕ ಪೆದರೆಡ್ಡಿ ಅವರು ಇದೀಗ ಸ್ವಯಂ ನಿವೃತ್ತಿಗೊಂಡು ತಮ್ಮ ತಾಯ್ನಾಡಿಗೆ ಮರಳುತ್ತಿರುವುದು ಮಾನ್ವಿ ತಾಲೂಕಿನವರಿಗೆ ಹೆಮ್ಮೆಯ ವಿಷಯವಾಗಿದೆ.

ಮಾನ್ವಿ ತಾಲೂಕಿನ ಪುಟ್ಟ ಗ್ರಾಮ ದೇವಿಪುರದಲ್ಲಿ ಬಡ ಕುಟುಂಬದಲ್ಲಿ ಜನಿಸಿದ ಮಲ್ಲಯ್ಯ ನಾಯಕರು, ಬಾಲ್ಯದಲ್ಲೇ ಅನೇಕ ಸಂಕಷ್ಟಗಳನ್ನು ಎದುರಿಸುತ್ತಾ ತಮ್ಮ ವಿದ್ಯಾಭ್ಯಾಸವನ್ನು ಆರಂಭಿಸಿದರು. ಗ್ರಾಮದ ಸರಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಅವರು, ನಂತರ ಮಾನ್ವಿ ತಾಲೂಕಿನ ವಿವಿಧ ಸರ್ಕಾರಿ ಶಾಲಾ ಮತ್ತು ಕಾಲೇಜುಗಳಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಸಂಕಷ್ಟಗಳ ನಡುವೆ ಬೆಳೆದರೂ ದೇಶ ಸೇವೆ ಮಾಡುವ ಸಂಕಲ್ಪವನ್ನು ಅವರು ಎಂದಿಗೂ ಕೈಬಿಡಲಿಲ್ಲ.

ಈ ದೃಢ ಸಂಕಲ್ಪದ ಫಲವಾಗಿ, 2004ರಲ್ಲಿ ಅವರು ಭಾರತೀಯ ಗಡಿ ಭದ್ರತಾ ಪಡೆ (ಃಖಈ)ಗೆ ಸೇರ್ಪಡೆಯಾದರು. ಕಠಿಣ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಬಳಿಕ, ಗುಜರಾತ್ ರಾಜ್ಯದಿಂದ ಹಿಡಿದು ಈಶಾನ್ಯ ಭಾರತದ ಅತಿ ಸೂಕ್ಷ್ಮ ಗಡಿ ಪ್ರದೇಶಗಳವರೆಗೆ ವಿವಿಧ ಕಠಿಣ ಪರಿಸ್ಥಿತಿಗಳಲ್ಲಿ ಸೇವೆ ಸಲ್ಲಿಸಿದರು. ಗಡಿ ರಕ್ಷಣೆಯಲ್ಲಿ ಅವರು ತೋರಿದ ಶೌರ್ಯ, ಶಿಸ್ತು ಮತ್ತು ದೇಶಭಕ್ತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಸುದೀರ್ಘ ಸೇವಾ ಅವಧಿಯ ನಂತರ, ಈಗ ಸ್ವಯಂ ನಿವೃತ್ತಿ ಪಡೆದುಕೊಂಡಿರುವ ಮಲ್ಲಯ್ಯ ನಾಯಕರು, ದಿನಾಂಕ 04–04–2026 ರಂದು ಶನಿವಾರ ತಮ್ಮ ಸ್ವಗ್ರಾಮ ದೇವಿಪುರಕ್ಕೆ ಆಗಮಿಸುತ್ತಿದ್ದಾರೆ. ಅವರ ಆಗಮನದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಪ್ರದೇಶದ ಜನರು ಅದ್ದೂರಿಯಾಗಿ ಸ್ವಾಗತಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ. ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಯುವಕರು ಹಾಗೂ ಹಿರಿಯರು ಒಗ್ಗಟ್ಟಿನಿಂದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮುಂದಾಗಿದ್ದಾರೆ.

ಈ ಸಂದರ್ಭದಲ್ಲಿ, ಕೇಂದ್ರೀಯ ಶಸ್ತ್ರಸೇನೆಗಳ ಮಾಜಿ ಯೋಧರ




ಕ್ಷೇಮಾಭಿವೃದ್ಧಿ ಸಂಘ, ಸಿರವಾರ ಹಾಗೂ ಮಾನ್ವಿ ತಾಲೂಕಿನ ವಂದೇ ಮಾತರಂ ಯುವ ಸಂಘ, ಮದ್ಲಾಪುರ ವತಿಯಿಂದ ಯೋಧರಿಗೆ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ವಿವಿಧ ಗಣ್ಯರು, ಮಾಜಿ ಯೋಧರು, ಸಮಾಜ ಸೇವಕರು ಹಾಗೂ ಸಾರ್ವಜನಿಕರು ಭಾಗವಹಿಸಲಿದ್ದಾರೆ.

ಸಂಘದ ಅಧ್ಯಕ್ಷರು ಮಾತನಾಡಿ, “ದೇಶ ಸೇವೆ ಮಾಡಿದ ಯೋಧರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. ಮಲ್ಲಯ್ಯ ನಾಯಕರು ನಮ್ಮ ತಾಲೂಕಿನ ಹೆಮ್ಮೆ. ಅವರ ಸೇವೆ ಯುವಜನತೆಗೆ ಸ್ಪೂರ್ತಿದಾಯಕವಾಗಿದೆ,” ಎಂದು ಹೇಳಿದರು.

ಮಾನ್ವಿ ತಾಲೂಕಿನ ಸಮಸ್ತ ದೇಶಭಕ್ತರು, ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯೋಧನಿಗೆ ಭಾವಪೂರ್ಣ ಸ್ವಾಗತ ಕೋರಬೇಕೆಂದು ಸಂಘದ ವತಿಯಿಂದ ಮನವಿ ಮಾಡಲಾಗಿದೆ. ಯೋಧನ ಆಗಮನದ ಈ ಸಂಭ್ರಮವು ಕೇವಲ ಒಂದು ಸ್ವಾಗತ ಕಾರ್ಯಕ್ರಮವಲ್ಲ, ದೇಶಭಕ್ತಿಗೆ ಸಲ್ಲಿಸುವ ನಮನವಾಗಿದ್ದು, ಮುಂದಿನ ಪೀಳಿಗೆಗೆ ದೇಶ ಸೇವೆಯ ಪ್ರೇರಣೆಯಾಗಲಿದೆ.

## ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಸಂಗೀತ–ಸಾಹಿತ್ಯದ ಅಭಿರುಚಿ ಬೆಳೆಸಿಕೊಳ್ಳಲಿ: ಉದಯ್ ಕುಮಾರ್ ಸೌಕಾರ್



ಧೈರ್ಯದ ದಾರಿ

**ಸಿರವಾರ:** "ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗದೆ, ಸಂಗೀತ ಮತ್ತು ಸಾಹಿತ್ಯದತ್ತ ಅಭಿರುಚಿ ಬೆಳೆಸಿಕೊಳ್ಳಬೇಕು" ಎಂದು ವಾಣಿಜ್ಯೋದ್ಯಮಿ ಎನ್. ಉದಯ್ ಕುಮಾರ್ ಸೌಕಾರ್ ಅವರು ಕರೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್ತು ರಾಯಚೂರು, ತಾಲೂಕು ಸಾಹಿತ್ಯ ಪರಿಷತ್ತು ಸಿರವಾರ, ಕಾಲೇಜಿನ ಐಕ್ಯೂಎಸಿ (ಖಕಿಂಅ) ಹಾಗೂ ಕನ್ನಡ ವಿಭಾಗದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ’ಧ್ಯಾನಕೋಗಿಲೆ ದಿವಂಗತ ಹನುಮಂತಯ್ಯ ಸ್ವಾಮಿ ಮುಂಡರಗಿ ಮಠ’ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಕೇವಲ ಅಂಕಗಳಿಗಾಗಿ ಪಠ್ಯ ಓದುವುದರಿಂದ ಬುದ್ಧಿಶಕ್ತಿ ಬೆಳೆಯಬಹುದು. ಆದರೆ, ಭಾವನಾತ್ಮಕ ಬೆಳವಣಿಗೆಗೆ ಸಂಗೀತ ಮತ್ತು ಸಾಹಿತ್ಯ ಅತ್ಯಗತ್ಯ. ಸಾಹಿತ್ಯವು ಜೀವನದ ಮೌಲ್ಯಗಳನ್ನು ಕಲಿಸಿದರೆ, ಸಂಗೀತವು ಮನಸ್ಸಿಗೆ ಶಾಂತಿ ಮತ್ತು ಸಮನ್ವಯತೆಯನ್ನು ನೀಡುತ್ತದೆ. ಇವೆರಡರ ಸಮನ್ವಯದಿಂದ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯ" ಎಂದು ಅವರು ಅಭಿಪ್ರಾಯಪಟ್ಟರು.

ಸಂಗೀತದ ಸ್ಥಿತಿಗತಿ ಕುರಿತು ಉಪನ್ಯಾಸ:

ಕೌತಾಳದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಶಿಕ್ಷಕ ಕೆ. ಶಂಕ್ರಯ್ಯ ಅವರು 'ಸಂಗೀತದ ಪ್ರಸ್ತುತ ಸ್ಥಿತಿಗತಿಗಳು' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಸಂಗೀತ ಕಲಾವಿದರನ್ನು ಸನ್ಮಾನಿಸಿ ಗೌರವಿಸಲಾಯಿತು. ರಾಜ್ಯ ಪ್ರಶಸ್ತಿ ಪುರಸ್ಕೃತ ಸ್ಥಳೀಯ ವಾದಕ ಹುಲಿಗೆಪ್ಪ ಭಜಂತ್ರಿ ಅವರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಕಾಲೇಜಿನ ಪ್ರಾಂಶುಪಾಲರಾದ ಡಾ. ಹನುಮಂತಪ್ಪ ಕೋರಪುರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಸಿರವಾರ ಘಟಕದ ಸಂಘಟನಾ ಕಾರ್ಯದರ್ಶಿ ಅಂಬರೀಶ್ ತಿನ್ನಿ ಕಾರ್ಯಕ್ರಮ ರೂಪಿಸಿದರು.

ವೇದಿಕೆಯಲ್ಲಿ ತಾಲೂಕು ಕಸಾಪ ಅಧ್ಯಕ್ಷ ಮೌನೇಶ್ ಹಿರೇಹಣಗಿ, ಕೋಶಾಧ್ಯಕ್ಷ ನಾಗಪ್ಪ ಪತ್ತಾರ್, ಗೌರವ ಕಾರ್ಯದರ್ಶಿ ಎಂ. ಗುಂಡಪ್ಪ, ವೆಂಕಟರೆಡ್ಡಿ ಬಲ್ಕರ್, ಉಪನ್ಯಾಸಕರಾದ ವಿನಯ್ ಶಂಕರ್, ವಿ. ರಾಜಶೇಖರ್, ಎಂ. ಲಕ್ಷ್ಮಣ್ ಯಾದವ್, ಸುಭಾನ್ ಸಾಬ್, ಎಸ್. ಮುತ್ತಪ್ಪ, ಗ್ರಂಥಾಲಯ ಅಧಿಕಾರಿ ಶ್ರೀಮತಿ ಪದ್ಮಾವತಿ, ಡಾ. ಮೂಗವ್ವ ಹಂದೆರ, ವೀರನಗೌಡ ಅಸರತ್ತಿ, ರಮೇಶ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

## ಬಿಜೆಪಿ ಸಿರವಾರ ಮಂಡಲ ಪ್ರಧಾನ ಕಾರ್ಯದರ್ಶಿಯಾಗಿ ಮಲ್ಲಿಕಾರ್ಜುನ್ ನಾಯಕ್ ಶಿಕಂಟಿ ನೇಮಕ

ಧೈರ್ಯದ ದಾರಿ



**ಸಿರವಾರ :** ಭಾರತೀಯ ಜನತಾ ಪಕ್ಷ ಸಿರವಾರ ಮಂಡಲ ಪ್ರಾಧಾನ ಕಾರ್ಯದರ್ಶಿಯಾಗಿ ಪಟ್ಟಣದ ಯುವ ಮುಖಂಡ ಮಲ್ಲಿಕಾರ್ಜುನ್ ನಾಯಕ್ ಶಿಖಂಟಿ ಅವರನ್ನು ನೇಮಕ ಮಾಡಲಾಗಿದೆ. ರಾಯಚೂರು ನಗರದಲ್ಲಿನ ಮಾಜಿ ಸಂಸದ ಬಿ ವಿ ನಾಯಕ್ ನಿವಾಸದಲ್ಲಿ ನಡೆದ ಸಭೆಯಲ್ಲಿ ಭಾರತೀಯ ಜನತಾ ಪಕ್ಷ ಮಾನ್ವಿ ವಿಧಾನಸಭಾ ಕ್ಷೇತ್ರದ ನಿರ್ವಹರ ಮಂಡಲದ ಪದಾಧಿಕಾರಿಗಳ ನೇಮಕ ಪ್ರಕ್ರಿಯೆಯಲ್ಲಿ ಮಲ್ಲಿಕಾರ್ಜುನ್ ನಾಯಕ್ ಶಿಖಂಟಿ ಅವರನ್ನು ನೇಮಕಗೊಳಿಸಲಾಯಿತು. ನಂತರ ಮಾತನಾಡಿದ ಮಲ್ಲಿಕಾರ್ಜುನ್ ನಾಯಕ್. ನನ್ನನ್ನು ನೇಮಕ ಮಾಡಲು ಕಾರಣಕರ್ತರಾದ ನಮ್ಮ ನಾಯಕ ಬಿ ವಿನಾಯಕ್ ರವರಿಗೆ ಪಕ್ಷದ ವರಿಷ್ಠರಿಗೆ ಹಿರಿಯ ನಾಯಕರಿಗೆ ಹಾಗೂ ಆತ್ಮೀಯ ಹಿತೈಷಿಗಳಿಗೆ ತುಂಬು ಹೃದಯದ ಧನ್ಯವಾದಗಳು ತಿಳಿಸಿದರು ಪಕ್ಷದ ವರಿಷ್ಠರ ಮಾರ್ಗದರ್ಶನವೇ ನನ್ನ ರಾಜಕೀಯ ಜೀವನಕ್ಕೆ ದಿಕ್ಕು ತೋರಿಸಿದೆ ಎಂದು ಹೇಳಿದರು. ಪಕ್ಷದ ಜಿಲ್ಲಾ ಉಪಾಧ್ಯಕ್ಷ ಮಲ್ಲಿಕಾರ್ಜುನ್ ಜಕ್ಕಲದಿನ್ನಿ, ಸಿರ್ವಾರ್ ಮಂಡಲದ ಅಧ್ಯಕ್ಷ ಆರ್ ಕೆ ಅಂಬರೀಶಪ್ಪ ಸೌಕಾರ್. ಮುಖಂಡರಾದ ಹನುಮರೆಡ್ಡಿ ಗಣದಿನ್ನಿ ಭಾರತ್ ನಾಯಕ್ ಎಂ ಉದಯ್ ಕುಮಾರ್ ಚಾಗಬಾವಿ ಅನಿತಾ ನವಲಕಲ್ ಸೇರಿದಂತೆ ಇತರರು ಇದ್ದರು

ಮೊದಲನೇ ಪುಟದಿಂದ

# ನಕಲಿ ಕ್ಲಿನಿಕ್‌ಗಳ ಮೇಲೆ ದಾಳಿ 18 ಎಫ್‌ಐಆರ್ ದಾಖಲು, 13 ಕ್ಲಿನಿಕ್ ಸೀಜ್

ವೈದ್ಯರುಗಳನ್ನು ಗುರುತಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ದಾಳಿ ವೇಳೆ ನಕಲಿ ವೈದ್ಯರು ಬಳಸುತ್ತಿದ್ದ ಔಷಧಿಗಳು, ಉಪಕರಣಗಳು ಮತ್ತು ದಾಖಲೆಗಳನ್ನು ವಶಪಡಿಸಿಕೊಂಡು ಸಿಲ್ ಮಾಡಲಾಗಿದೆ. ಮುಂದುವರೆದು ಜಿಲ್ಲೆಯಲ್ಲಿ ನಕಲಿ ವೈದ್ಯರ ವಿರುದ್ಧ ಕಾರ್ಯಚರಣೆ ಮುಂದುವರೆಯಲಿದ್ದು, ಜಿಲ್ಲೆಯಲ್ಲಿ ನಕಲಿ ವೈದ್ಯರು ಇಲ್ಲದಂತೆ ಕ್ರಮ ವಹಿಸಲಾಗುವುದು ಎಂದರು.

ದಾಳಿಯ ನಂತರ ದಾಖಲಾತಿಗಳ ಪರಿಶೀಲನೆ ಕೈಗೊಂಡು ನಕಲಿ ವೈದ್ಯರ ವಿರುದ್ಧ ಒಟ್ಟು 18 ನಕಲಿ ವೈದ್ಯರ ವಿರುದ್ಧ ಎಫ್‌ಐಆರ್ ದಾಖಲು ಮತ್ತು 13 ಕ್ಲೀನಿಕ್ ಗಳನ್ನು ಸೀಜ್ ಮಾಡಿ ನೋಟಿಸ್ ನೀಡಲಾಗಿದೆ. ಸಾರ್ವಜನಿಕರು ಈ ದಿಶೆಯಲ್ಲಿ ತಮ್ಮ ಗ್ರಾಮದಲ್ಲಿ ವೈದ್ಯ ವೃತ್ತಿ ಮಾಡಲು ಯಾರಾದರೂ ಆಗಮಿಸಿದರೆ ದಯವಿಟ್ಟು ಅವರ ವಿದ್ಯಾರ್ಹತೆಯ ಮಾಹಿತಿ ಪಡೆಯಬೇಕು. ಒಂದು ವೇಳೆ ನಕಲಿ ವೈದ್ಯರಾದರೆ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಮಾಹಿತಿ ನೀಡಬೇಕು. ಕಟ್ಟಡಗಳನ್ನು, ಮಳಿಗೆ, ಮನೆಗಳನ್ನು ಬಾಡಿಗೆ ನೀಡುವ ಮಾಲಿಕರು ಸಹ ಎಚ್ಚರಿಕೆ ವಹಿಸಬೇಕೆಂದು ಜಿಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಲ್ಲಾ ರಾಜ್ಯಗಳಲ್ಲೂ ದ್ವಿಭಾಷಾ ಶಿಕ್ಷಣದ ವ್ಯವಸ್ಥೆ ಜಾರಿಯಲ್ಲಿದೆ : ಬಿಜೆಪಿಗೆ ಮಧು ಬಂಗಾರಪ್ಪ ತಿರುಗೇಟು

ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯವನ್ನು ಆಳಿದವರು. ಅವರಿಗೆ ಗೌರವ ಕೊಡುತ್ತೇವೆ. ಆದರೆ ಕನ್ನಡಿಗರಿಗೆ ಮೋಸ ಮಾಡಿದವರೇ ಅವರು. ರಾಜ್ಯದ ತೆರಿಗೆ ಸಂಗ್ರಹ ಕುರಿತಂತೆ ಬಿಜೆಪಿಯವರು ದನಿ ಎತ್ತುವುದಿಲ್ಲ. ಅತಿಹೆಚ್ಚು ತೆರಿಗೆ ಪಾವತಿಸುವ ರಾಜ್ಯದಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ. ಬರಗಾಲ ಬಂದಾಗಲೂ ಬಿಜೆಪಿಯವರು ದನಿ ಎತ್ತುವುದಿಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.ಸಿಬಿಎಸ್‌ಇ ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಅದಕ್ಕೆ ನಾವು ನಿಯಮಗಳನ್ನು ರೂಪಿಸಿದ್ದೇವೆ. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರ ಕನ್ನಡ ಭಾಷಾ ಬಳಕೆ ಕೇಳಿದ್ದೀರಾ? ಎಂದು ಪ್ರಶ್ನಿಸಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಶಿಕ್ಷಣ ಸಚಿವರಿಗೆ ಶಿಕ್ಷಣವಿಲ್ಲ ಎಂದು ಟೀಕಿಸಿದ್ದಾರೆ. ಅವರು ಹಿಂದಿ ಭಾಷೆ ಮಾತನಾಡುವುದನ್ನು ಕೇಳಿದೀರಾ? ಸಾಮಾಜಿಕ ಮಾಧ್ಯಮದಲ್ಲಿ ನಾನು ಗಮನಿಸಿದ್ದೇನೆ. ಆದರೆ ಶೋಭಾ ಕರಂದ್ಲಾಜೆ ಅವರು ಹಿಂದಿ ಮಾತನಾಡುವುದನ್ನು ನೋಡಿ ನಾವು ರಾಜ್ಯದಲ್ಲಿ ತೃತೀಯ ಭಾಷೆ ಹಿಂದಿ ವಿಚಾರದಲ್ಲಿ ಈ ನಿರ್ಧಾರ ಮಾಡಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

# ರಾಯಚೂರು ಜಿಲ್ಲಾ ಕಾರಾಗೃಹದಲ್ಲಿ ಭಗವಾನ್ ಮಹಾವೀರ ಜನ್ಮ ಕಲ್ಯಾಣೋತ್ಸವ ಆಚರಣೆ



ಧೈರ್ಯದ ದಾರಿ

**ರಾಯಚೂರು:** ನಗರದ ಜಿಲ್ಲಾ ಕಾರಾಗೃಹದಲ್ಲಿ ದಿನಾಂಕ 31/ 03/ 2026 ರಂದು ಭಗವಾನ್ ಮಹಾವೀರ ಕಲ್ಯಾಣ ಜನ್ಮೋತ್ಸವ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಡಿ ವೈ ಎಸ್ ಪಿ ಶಾಂತವೀರ ಇವರು ಕಾರ್ಯಕ್ರಮ ಕುರಿತು ಮಾತನಾಡುತ್ತಾ. ಭಗವಾನ್ ಮಹಾವೀರರು ಐದು ಪ್ರಮುಖವಾದ ತತ್ವಗಳನ್ನು ಬೋಧನೆ ಮಾಡಿದರು. ಅಹಿಂಸೆ. ಸತ್ಯ. ಆಸ್ತಿಯ. ಸ0ಯಮ ಬ್ರಹ್ಮಚರ್ಯ.ಮತ್ತು ಅಪರಿಗ್ರಹ ಇವು ಅತ್ಯಂತ ಪ್ರಮುಖವಾದಗಳು. ಪ್ರತಿಯೊಂದು ಅಂಶಗಳು ನಾವು ಪಾಲನೆ ಮಾಡಿದರೆ.

ನಮ್ಮ ಜೀವನದಲ್ಲಿ ನಾವೆಂದು ತಪ್ಪು ಮಾಡುವುದಿಲ್ಲ. ತಾವು ಯಾವುದೇ ಒಂದು ತಪ್ಪು ಮಾಡಿ ಬಂದಿ ಗಳುಯಾಗಿದ್ದೀರಿ. ಅಂಶಗಳನ್ನು ಪ್ರತಿಯೊಬ್ಬರೂ ಪಾಲನೆ ಮಾಡಬೇಕು ಅವರು ಜೀವನದಲ್ಲಿ ಮುಂದೆ ತಪ್ಪು ಮಾಡಲು ಅವಕಾಶವಿರುವುದಿಲ್ಲ. ಅವರ ಪ್ರಮುಖ ಅಂಶ ಸಮಾಜ ದೇಶ ರಾಷ್ಟ್ರ ಎಲ್ಲವೂ ಶಾಂತಿ ಆಗಿರಬೇಕೆಂಬುದು ಪ್ರಮುಖವಾದ ಅಂಶವಾಗಿತ್ತು. ಜೈನ ಧರ್ಮದ ಬಗ್ಗೆ ಹಲವಾರು ಕವಿಗಳು ಬರೆದ ಪುಸ್ತಕವನ್ನು ನಾನು ಚೆನ್ನಾಗಿ ಅಧ್ಯಯನ ಮಾಡಿದ್ದೇನೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಯಾದ ಡಾ. ದಂಡಪ್ಪ ಬಿರಾದಾರ ಮಾತನಾಡುತ್ತಾ.ಬದುಕಿರಿ. ಮತ್ತೊಬ್ಬರನ್ನು ಬದುಕಲು ಬಿಡಿರಿ. ಬದುಕುವುದು ಪ್ರತಿಯೊಬ್ಬರ ಹಕ್ಕು. ಮತ್ತೊಬ್ಬರ ಬದುಕು ಹಕ್ಕನ್ನು ಕಸಿದುಕೊಳ್ಳುವುದು ಯಾರಿಗೆ ಇರುವುದಿಲ್ಲ.ಎಂಬ ಪ್ರಮುಖ ಅಂಶವನ್ನು ಭಗವಾನ್ ಮಹಾವೀರರು ಜನತೆಗೆ ಆ ಸಂದರ್ಭದಲ್ಲಿ ಸಂದೇಶವನ್ನು ರೂಪದಲ್ಲಿ ಹೇಳಿದರು.

ಸಿಟ್ಟು ತನ್ನವೇರಿ ಶಾಂತಿ ಪರರ ವೈರಿ ಎನ್ನುವಂತೆ ಇಲ್ಲಿಯ ಕೆಲವು ಜನಗಳು ಸಿಟ್ಟಿನ ಸಮಯದಲ್ಲಿ ಮಾಡಿದ ತಪ್ಪಿಗೆ ಅಥವಾ ದ್ವೇಷ ಇಟ್ಟುಕೊಂಡು ಮಾಡಿದ ತಪ್ಪಿಗೆ ತಾವು ಇಲ್ಲಿ ಬಂದಿದ್ದೀರಿ ಭಗವಾನ್ ಮಹಾವೀರ ರ ಅಂಶಗಳನ್ನು ತಾವು ಅಳವಡಿಸಿಕೊಂಡು ಸಂಸ್ಕೃತರಾಗಿ ಹೊರಗೆ ಹೋಗಿ ಸಾಮಾಜಿಕ ಬದುಕನ್ನು ನಡೆಸಿರಿ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷರಾದ ಪ್ರಕಾಶ್ ಚಂದ್ರು ಚೋರಡಿಯ ಮಾತನಾಡುತ್ತಾ ಭಗವಾನ್ ಮಹಾವೀರರು ಒಬ್ಬ ರಾಜಮನೆತನದವರು. ಅವರ ತಂದೆ ಸಿದ್ದಾರ್ಥ್ ರಾಜರಾಗಿದ್ದರು ಅವರ ಜೀವನದಲ್ಲಿ ಬದಲಾವಣೆಯನ್ನು ಸಮಾಜಕ್ಕಾಗಿ ಸಮಾಜದಲಿನ ಕೆಟ್ಟ ಪದ್ಧತಿಗಳನ್ನು ತೆಗೆದುಹಾಕಲು ನಿರಂತರವಾಗಿ ಕಾರ್ಯವನ್ನು ಭಗವಾನ್ ಮಾವರು ಮಾಡಿದ್ದಾರೆ. ಈ ಮಹಾಪುರುಷನ ಜನ್ಮ ಕಲ್ಯಾಣೋತ್ಸವದ ಅಂಗವಾಗಿ ನಮ್ಮ ಸಮಾಜದಿಂದ ವಿವಿಧ ಕಾರ್ಯಕ್ರಮಗಳನ್ನು ಇಂದು ಆಯೋಜನೆ ಮಾಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ರಾಯಚೂರ ಜಿಲ್ಲಾ ಕಾರಾ ಗೃಹ ಅಧಿಕ್ಷಕರಾದ ಅನಿತಾ ಹಿರೇಮನಿಯವರು ಮಾತನಾಡುತ್ತಾ. ಇಂದು ನಮ್ಮ ಕಾರಾಗೃಹಕ್ಕೆ ಜೈನ ಸಮಾಜದ ಸಂಘದವರು ಬಂದು ಭಗವಾನ್ ಮಹಾವೀರ ಹುಟ್ಟುಹಬ್ಬ ಅಂಗವಾಗಿ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ ಇಲ್ಲಿ ನಮ್ಮ ಜೈಲಿನಲ್ಲಿ ಬಹಳಷ್ಟು ಜನ ಬಂದಿಖಗಳಾಗಿ ಇದ್ದೀರಿ ನೀವುಗಳು ಭಗವಾನ್ ಮಹಾವೀರ ವಿಚಾರಗಳನ್ನ ತತ್ವಗಳನ್ನು ಅವರ ಅಂಶಗಳನ್ನು ಅಳವಡಿಸಿಕೊಂಡು ಮುಂದೆ ಮಾಡಿದ ತಪ್ಪನ್ನು ಮಾಡಬಾರದು.ನಮ್ಮ ಜೈನ ಸಮುದಾಯುದವರು ಈ ಕಾರ್ಯಕ್ರಮವನ್ನು ನಮ್ಮಲ್ಲಿ ಆಯೋಜನೆ ಮಾಡಿದ್ದಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತೇನೆ ಎಂದು ಹೇಳಿದರು.ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕ ನುಡಿಯನ್ನು ಅಶೋಕ್ ಕುಮಾರ್ ಜೈನ ಅವರು ಮಾತನಾಡುತ್ತಾ.ಇಂದು ಈ ಒಂದು ಸ್ಥಳದಲ್ಲಿ ಭಗವಾನ್ ಮಹಾವೀರರ ಜನ್ಮ ಕಲ್ಯಾಣೋತ್ಸವವನ್ನು ಆಚರಣೆ ಮಾಡುವ ಉದ್ದೇಶ ಏನೆಂದರೆ ಕೆಲವರು ಗೊತ್ತಿಲ್ಲದೇವೋ ಅಥವಾ ಆವೇಶದಲ್ಲಿಯೂ ಅಥವಾ ಸಿಟ್ಟಿನಲ್ಲಿಯೂ ಮಾಡಿದ ತಪ್ಪಿಗೆ ತಾವು ಇಲ್ಲಿ ಬಂದಿದ್ದೀರಿ ಮತ್ತೆ ಆ ತಪ್ಪನ್ನು ಮಾಡಬಾರದು ಈ ಮಹಾಪುರುಷನ ಜೀವನದಲ್ಲಿಯ ಪ್ರಮುಖ ಅಂಶಗಳನ್ನು ತಮಗೆ ತಿಳಿಸಬೇಕೆಂಬ ಮಹಾದಶೆಯಿಂದ ಈ ಕಾರ್ಯಕ್ರಮವನ್ನು ಇಲ್ಲಿ ಆಯೋಜನೆ ಮಾಡಲಾಗಿದೆ ಎಂದು ಹೇಳಿದರು

# ತಾಲೂಕು ಆಡಳಿತದಿಂದ ಶಿವಶರಣೆ ಅಕ್ಕಮಹಾದೇವಿ ಜಯಂತಿ ಆಚರಣೆ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ತಾಲೂಕು ಆಡಳಿತ ವತಿಯಿಂದ ನಡೆದ ಶಿವಶರಣೆ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಶಿವಶರಣೆ ಅಕ್ಕಮಹಾದೇವಿ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸುವ ಮೂಲಕ ಆಚರಿಸಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಮಾತನಾಡಿ ಶಿವಶರಣೆ ಅಕ್ಕಮಹಾದೇವಿ 12 ನೇ ಶತಮಾನದಲ್ಲಿ ಮಹಾಶಿವಶರಣೆಯಾಗಿದ್ದರು ಹಾಗೂ ಇವರು ಕನ್ನಡದಲ್ಲಿ ಚೆನ್ನಮಲ್ಲಿಕಾರ್ಜುನ ಎನ್ನುವ ಅಂಕಿತದಲ್ಲಿ ಅನೇಕ ವಚನಗಳನ್ನು ಬರೆಯುವ ಮೂಲಕ ಕನ್ನಡದ ಪ್ರಥಮ ವಚನಗಾರ್ತಿಯಾಗಿದ್ದಾರೆ. ಇವರ ವಚನಗಳು ಕನ್ನಡ ಸಾಹಿತ್ಯದ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅಕ್ಕಮಹಾದೇವಿಯವರು ನಮಗೆ ಸತ್ಯ,ಶುದ್ಧತೆ ಮತ್ತು ಭಕ್ತಿಯ ಮಾರ್ಗವನ್ನು ತೋರಿದ್ದಾರೆ ಎಂದು ತಿಳಿಸಿದರು. ಉಪನ್ಯಾಸಕರಾದ ಚನ್ನಬಸವ ಮಾಡಗಿರಿಯವರು ಶಿವಶರಣೆ ಅಕ್ಕಮಹಾದೇವಿಯವರ ಜೀವನ,ವಚನಗಳು, ಹಾಗೂ ಅವರು ಭೋದಿಸಿದ ತತ್ವಗಳ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ತಾಲೂಕು ಆಡಳಿತ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಗಂಗಾಧರನಾಯಕ, ಗ್ರೇಡ್–2 ತಹಶೀಲ್ದಾರ್ ಅಬ್ದುಲ್ ವಾಹಿದ್, ವಿನಾಯಕರಾವ್,ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್,ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ.ಅಧ್ಯಕ್ಷರಾದ ಅರುಣಚಂದಾ, ಗುಮ್ಮ ಬಸವರಾಜ, ಹೆಚ್,ಮೌನೇಶಗೌಡ,ಶಿವಲಿಂಗಯ್ಯ, ಗುರುಸಿದ್ದಪ್ಪ ಕಣೂರು, ವೀರನಗೌಡ ವಕೀಲರು, ಬಸವಕೇಂದ್ರದ ಅಧ್ಯಕ್ಷರಾದ ಶರಣಬಸವ ಬೆಟ್ಟದೂರು, ಹೋಯ್ಸಳಸ್ವಾಮಿ,ಶಂಕರಪ್ಪ.ಸಂಗಮೇಶ ಮುದೋಳ್ ಸೇರಿದಂತೆ ಇನ್ನಿತರರು ಇದ್ದರು.

# ತಾಲೂಕು ಬಸವ ಕೇಂದ್ರದ ತಾಲೂಕ ಘಟಕದ ನೂತನ ಪದಾಧಿಕಾರಿಗಳ ಅಯ್ಕೆ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಬಸವ ಕೇಂದ್ರದ ತಾಲೂಕ ಘಟಕದ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು
ಬಸವ ಕೇಂದ್ರದ ತಾಲೂಕ ಘಟಕದ ತಾ,ಅಧ್ಯಕ್ಷರಾಗಿ ಶರಣಬಸವ ಬೆಟ್ಟದೂರು, ಗೌರವ ಅಧ್ಯಕ್ಷರಾಗಿ ಡಾ. ಬಸವ ಪ್ರಭು ಪಾಟೀಲ್, ಉಪಾಧ್ಯಕ್ಷರಾಗಿ ಶಂಭನಗೌಡ ಹರವಿ, ವೈ. ಸುರೇಶ ಬಲ್ಲಟಗಿ ,ಪರಮೇಶ್ ಹರನಹಳ್ಳಿ, ಪ್ರಧಾನ ಕಾರ್ಯದರ್ಶಿಗಳಾಗಿ ಲೋಕೇಶ್ ನಾಯ್ಕರ್, ಲಕ್ಷ್ಮಣ್ ಜಾನೇಕಲ್ , ಸಂಘಟನಾ ಕಾರ್ಯದರ್ಶಿಗಳಾಗಿ ಬಸವರಾಜ್ ಸಂಕೇಶ್ವರ್, ಎಂ. ಅಮರೇಶ್ ಬೆಟ್ಟದೂರು, ಮಹಾಂತೇಶ್ ಗವಿಗಟ್. ಖಜಾಂಚಿಯಾಗಿ ತಿಪ್ಪಣ್ಣ ಹೊಸಮನಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಶಿವಕುಮಾರ್ ರಾಮದುರ್ಗ , ಚನ್ನಬಸವಪ್ಪ ಮಲ್ಕಮದಿನ್ನಿ. ಉಮೇಶ್, ಚನ್ನಬಸವ ಮಾಡಗಿರಿ , ತ್ರಯಂಬಕೇಶ್ ಮೇದ, ಈರಯ್ಯ ಮೇದ , ಹಡಪದ ಅಮರೇಶ್, ಸಂಜೀವಪ್ಪ ಶಿಕ್ಷಕರು, ಶ್ರೀನಿವಾಸ್ ಅನಂತಾರಾಮುಲು, ರಾಮು ಹೊಳೆಯಪ್ಪನವರ , ಉದಯ್ ಶಂಕರ್ , ಗವಿಗೆಟ್ ಅಮರೇಶ್,ಸಂತೋಷ್ ಹಾಗೂ ಗೌರವ ಸಲಹೆಗಾರರಾಗಿ ನಾಗರಾಜ್ ಬಳಿಗಾರ್, ದೇವೇಂದ್ರ ದುರ್ಗ , ಚಂದ್ರಶೇಖರ್ ಸುವರ್ಣ ಗಿರಿ ಮಠ , ಮಹಾಂತೇಶ ಸ್ವಾಮಿ ರೌಡೂರ್ , ಶರಣಬಸವ ನೀರ ಮಾನ್ವಿ , ಗುಮ್ಮ ಬಸವರಾಜ್ ,ಉಮೇಶ್ ಚಿಮಲಾಪುರ್ ,ಎಂ. ಚನ್ನಬಸವ ಬೆಟ್ಟದೂರ್, ನೀಲಕಂಠ ಮೇದ, ಜಿ.ಎಂ.ರಂಗಪ್ಪ . ಡಿ.ಜಿ.ಕರ್ಕಿಹಳ್ಳಿ . ಶೇಖರಪ್ಪ ವಕೀಲರು . ಮಹಮ್ಮದ್ ಮುಜೀಬ್ ಅಯ್ಕೆ ಮಾಡಲಾಯಿತು.

# ಕಾಲುವೆಯನ್ನು ಸ್ವಚ್ಛಗೊಳಿಸಿ ಕೆರೆಗೆ ನೀರು ಬೀಡಿ: ಗಂಗಾಧರ ನಾಯಕ



ಧೈರ್ಯದ ದಾರಿ

**ಮಾನ್ವಿ:** ಮಾನ್ವಿ ಪಟ್ಟಣದ ತುಂಗಭದ್ರ ಕಾಲುವೆಯನ್ನು ಪರಿಶೀಲಿಸಿ ಮಾಜಿ ಶಾಸಕ ಗಂಗಾಧರ ನಾಯಕ ಮಾತನಾಡಿ ಪುರಸಭೆಯಿಂದ ಪಟ್ಟಣದಲ್ಲಿ ಕಳೆದ 6 ತಿಂಗಳಿಂದ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯಾತ್ಯಯವಾಗುತ್ತಿದ್ದರು ಕೂಡ ಅನೇಕ ಬಾರಿ ಮನವಿ ಸಲ್ಲಿಸಿದರು ಕೂಡ ಯಾವುದೇ ಕ್ರಮ ಕೈಗೊಂಡಿಲ್ಲ,

ಪಟ್ಟಣದ ಜನರಿಗೆ ಕುಡಿಯುವ ನೀರಿಗಾಗಿ ರಬ್ಬಣಕಲ್ ಗ್ರಾಮದಲ್ಲಿ ಕುಡಿಯುವ ನೀರಿನ ಕೆರೆಯಲ್ಲಿ ನೀರಿನ ಮಟ್ಟ ಸಂಪೂರ್ಣವಾಗಿ ಕುಸಿದಿದ್ದು ಸರ್ಕಾರದಿಂದ ಕುಡಿಯುವ ನೀರಿಗಾಗಿ ತುಂಗಭದ್ರಜಲಾಶಯದಿಂದ ಕಾಲುವೆ ಮೂಲಕ ನೀರನ್ನು ಬಿಡಲಾಗುತ್ತಿದೆ ಅದ್ದರೆ ರಬ್ಬಣಕಲ್ ಕೆರೆಗೆ ನೀರು ತುಂಬಿಸುವ ಪಟ್ಟಣದ ಕಾಲುವೆಯ ಎರಡು ಕಡೆಯ ಮನೆಗಳವರು ತಮ್ಮ ತ್ಯಾಜ್ಯ ನೀರನ್ನು ಹಾಗೂ ಚರಂಡಿ ನೀರನ್ನು ಕಾಲುವೆಗೆ ಬಿಡುತ್ತಿರುವುದರಿಂದ ಕಾಲುವೆಯ ನೀರು ಕಲುಷಿತವಾಗಿದ್ದು ಕಲುಷಿತವಾಗಿರುವ ನೀರನ್ನು ಕಾಲುವೆಗೆ ತುಂಬಿಸುವುದರಿಂದ ಕೆರೆಯ ನೀರು ಮಲಿನವಾಗುತ್ತದೆ ಹಾಗೂ ಕುಡಿಯುವುದಕ್ಕೆ ಯೋಗ್ಯವಾಗಿರುವುದಿಲ್ಲ ಕೂಡಲೇ ಪುರಸಭೆ ಮುಖ್ಯಾಧಿಕಾರಿಗಳು ಕಾಲುವೆಯ ಸ್ವಚ್ಛತೆಗೆ ಕ್ರಮ ಕೈಗೊಳ್ಳಬೇಕು ಇಲ್ಲದೆ ಇದ್ದಲ್ಲಿ ಪಟ್ಟಣದ ಜನರ ಆರೋಗ್ಯ ಹಾಳಗಲಿದೆ ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷದ ನೂರಾರು ಕಾರ್ಯಕರ್ತರು ಪುರಸಭೆ ಹಾಗೂ ತಹಶೀಲ್ದಾರ್ ಕಚೇರಿಗೆ ಬೀಗಹಾಕಿ ಪ್ರತಿಭಟನೆ ನಡೆಸಲಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಪಕ್ಷದ ಮುಖಂಡರಾದ ಜೆ.ಸುಧಕರ್,ಗುರುಸಿದ್ದಪ್ಪ ಕಣೂರು,ವಿಶ್ವನಾಥ ರಾಯಪ್ಪ ವಕೀಲರು,ಈರಣ್ಣ,ಸೇರಿದಂತೆ ಇನ್ನಿತರರು ಇದ್ದರು.

# ಸೇವೆ ಸ್ಮರಿಸುವ ದಿನ ಇದಾಗಿದೆ:ಲಿಂಗಾರೆಡ್ಡಿ ನಾಯಕ



**ಸೈದಾಪುರ:ಏ.2:**ಅನ್ನ, ಅಕ್ಷರ, ಆಶ್ರಯ ನೀಡಿದ ತ್ರೀವಿಧ ದಾಸೋಹಿ ನಡೆದಾಡುವ ದೇವೆರೆಂದೇ ಖ್ಯಾತರಾದ ಶತಾಯುಷಿ ಡಾ.ಶಿವಕುಮಾರ ಮಹಾಸ್ವಾಮಿಗಳ ಸೇವೆಯನ್ನು ಸ್ಮರಿಸುವ ಶ್ರೇಷ್ಠ ದಿನಾ ಇದಾಗಿದೆ ಎಂದು ಮುಖ್ಯಗುರು ಲಿಂಗಾರೆಡ್ಡಿ ನಾಯಕ ಅಭಿಪ್ರಾಯಪಟ್ಟರು.

ಪಟ್ಟಣದ ವಿದ್ಯಾ ವರ್ಧಕ ಸಂಘದ ವಿವಿಧ ವಿಭಾಗಳಿಂದ ಹಮ್ಮಿಕೊಂಡ ಡಾ.ಶಿವಕುಮಾರ ಮಹಾಸ್ವಾಮಿಗಳ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಅವರ ಬದುಕು ಮತ್ತು ಸಾಧನೆಗಳು ನಮಗೆ ಚೈತನ್ಯವನ್ನುಂಟು ಮಾಡುವಂತಾಗಿದೆ. ಅವರ ಸೇವಾ ಮನೋಭಾವನೆಯ ಗುಣಗಳನ್ನು, ಆದರ್ಶ ತತ್ವವಗಳನ್ನು ಪ್ರತಿಯೊಬ್ಬರು ತಮ್ಮ ತಮ್ಮ ಕಾಯಕದಲ್ಲಿ ಅಳವಡಿಸಿಕೊಂಡರೆ ಉತ್ತಮ ಸಮಾಜವನ್ನು ಕಂಡು ಕೊಳ್ಳಲು ಸಾಧ್ಯವಿದೆ ಎಂದು ಹೇಳಿದರು.

ಡಿ.ಎಲ್.ಇಡಿ ಕಾಲೇಜಿನ ಪ್ರಾಂಶುಪಾಲ ಕರಬಸಯ್ಯ ದಂಡಿಗಿಮಠ, ಹಿರಿಯ ಶಿಕ್ಷಕರಾದ ಗೂಳಪ್ಪ.ಎಸ್.ಮಲ್ದಾರ, ರಾಚಯ್ಯ ಸ್ವಾಮಿ ಬಾಡಿಯಾಲ, ರಾಜಶೇಖರ ಪಾಟೀಲ, ಹಣಮರಡ್ಡಿ ಮೋಟ್ನಳ್ಳಿ, ಆನಂದ ಪಾಟೀಲ ಸಂಗಾರೆಡ್ಡಿ, ಅಭಿಲಾಷ, ಅನುರಾಧ, ಮಧು, ಡಿ.ಎಲ್.ಇಡಿ ಪ್ರಶಿಕ್ಷಣಾರ್ಥಿಳು ಸೇರಿದಂತೆ ಇತರರಿದ್ದರು.

# ಧರ್ಮಸ್ಥಳದ ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟುಹಬ್ಬ: ಸಿರವಾರದಲ್ಲಿ ವೀಲ್ ಚೇರ್ ವಿತರಣೆ

ಧೈರ್ಯದ ದಾರಿ

**ಸಿರವಾರ:** ಶ್ರೀ ಕ್ಷೇತ್ರ ಧರ್ಮಸ್ಥಳದ ಮಾತೃಶ್ರೀ ಹೇಮಾವತಿ ವೀರೇಂದ್ರ ಹೆಗ್ಗಡೆಯವರ ಜನ್ಮದಿನದ ಅಂಗವಾಗಿ ಸಿರವಾರ ತಾಲೂಕಿನ ಶ್ರೀ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಜನಸೇವಾ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿತ್ತು.

ದೇವಸ್ಥಾನದಲ್ಲಿ ವಿಶೇಷ ಪೂಜೆ

ಕಾರ್ಯಕ್ರಮದ ಆರಂಭದಲ್ಲಿ ದೇವಸ್ಥಾನದಲ್ಲಿ ಅಮ್ಮನವರ ಹೆಸರಿನಲ್ಲಿ ವಿಶೇಷ ಅರ್ಚನೆ ಹಾಗೂ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಮಾತೃಶ್ರೀ ಹೇಮಾವತಿ ಅಮ್ಮನವರಿಗೆ ಆಯುಷ್ಯ, ಆರೋಗ್ಯ ವೃದ್ಧಿಸಲಿ ಎಂದು ಪ್ರಾರ್ಥಿಸಿ ಶುಭ ಕೋರಲಾಯಿತು.

ಸೇವಾ ಕಾರ್ಯಕ್ರಮಗಳು ಜನ್ಮದಿನದ ಸಂಭ್ರಮವನ್ನು ಜನಸೇವೆಯ ಮೂಲಕ ಆಚರಿಸುವ ಉದ್ದೇಶದಿಂದ ಈ ಕೆಳಗಿನ ಕಾರ್ಯಕ್ರಮಗಳನ್ನು ನಡೆಸಲಾಯಿತು:ಮಾಶಾಸನ ವಿತರಣೆ: ತಾಲೂಕಿನಾದ್ಯಂತ ಗುರುತಿಸಲಾದ 58 ಮಾಶಾಸನ ಫಲಾನುಭವಿಗಳಿಗೆ ಹಣ್ಣು-ಹಂಪಲುಗಳನ್ನು ವಿತರಿಸಲಾಯಿತು.ಸಹಾಯ ಹಸ್ತ: ದೈಹಿಕವಾಗಿ ಅಶಕ್ತರಾದ ಫಲಾನುಭವಿಗಳಿಗೆ ಓಡಾಟಕ್ಕೆ ಅನುಕೂಲವಾಗುವಂತೆ ಉಚಿತವಾಗಿ ವೀಲ್ ಚೇರ್ ವಿತರಣೆ ಮಾಡಲಾಯಿತು.

ಬಡವರ ಬಾಳಿಗೆ ಬೆಳಕಾದ ಕ್ಷೇತ್ರ: ರಾಘವೇಂದ್ರ ಪಟಗಾರಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಜಿಲ್ಲಾ ನಿರ್ದೇಶಕರಾದ ರಾಘವೇಂದ್ರ ಪಟಗಾರ ಅವರು ಮಾತನಾಡಿ, "ಅಮ್ಮನವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಸಮಾಜಮುಖಿ ಕಾರ್ಯಗಳು ಬಡವರ ಬಾಳಿಗೆ ಬೆಳಕಾಗಿವೆ," ಎಂದರು. ಅಲ್ಲದೆ ಕ್ಷೇತ್ರದ ಪ್ರಮುಖ ಸಾಧನೆಗಳನ್ನು ಮೆಲುಕು ಹಾಕಿದರು:ಮಹಿಳಾ ಸಬಲೀಕರಣ: ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರು ಸ್ವಾವಲಂಬಿಗಳಾಗಲು ಮತ್ತು ಆರ್ಥಿಕವಾಗಿ ಸದೃಢರಾಗಲು ಕ್ಷೇತ್ರವು ದೊಡ್ಡ ವೇದಿಕೆ ಕಲ್ಪಿಸಿದೆ.ವ್ಯಸನಮುಕ್ತ ಸಮಾಜ: ಮದ್ಯವರ್ಜನ ಶಿಬಿರಗಳ ಮೂಲಕ ಸಾವಿರಾರು ಕುಟುಂಬಗಳಲ್ಲಿ ನೆಮ್ಮದಿ ಮೂಡಿಸಲಾಗುತ್ತಿದೆ.ಜಲ ಸಂರಕ್ಷಣೆ: 'ನಮ್ಮೂರು ನಮ್ಮ ಕೆರೆ' ಯೋಜನೆಯಡಿ ಕೆರೆಗಳ ಹೂಳೆತ್ತುವ ಮೂಲಕ ಅಂತರ್ಜಲ ವೃದ್ಧಿಗೆ ಒತ್ತು ನೀಡಲಾಗುತ್ತಿದೆ.







ಗಣ್ಯರ ಉಪಸ್ಥಿತಿ

ಈ ಸಂದರ್ಭದಲ್ಲಿ ತಾಲೂಕು ಯೋಜನಾಧಿಕಾರಿ ಚಂದ್ರಹಾಸ ಬಿ., ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರಾದ ಅಯ್ಯನಗೌಡ ಪಾಟೀಲ್, ಜ್ಞಾನಮಿತ್ರ, ವಲಯ ಮೇಲ್ವಿಚಾರಕಿ ವನಿತಾ, ವಿವಿಧ ಸೇವಾಪ್ರತಿನಿಧಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ದರಪಟ್ಟಿ ಸಲ್ಲಿಸಲು ಅರ್ಜಿ ಆಹ್ವಾನ

**ರಾಯಚೂರು:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ನಿರ್ದೇಶಕರ ಕಚೇರಿಯಲ್ಲಿ 2024-25ನೇ ಸಾಲಿನ ಹಾಗೂ 2025ರ ಏಪ್ರಿಲ್ ಮಾಹೆಯ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳನ್ನು ವಿಲೇವಾರಿ ಮಾಡಲು ಆಸಕ್ತರಿಂದ ದರಪಟ್ಟಿ ಸಲ್ಲಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ತಮ್ಮ ದರಪಟ್ಟಿಗಳನ್ನು ಸಾರ್ವಜನಿಕ ರಜೆ ದಿನಗಳನ್ನು ಹೊರತುಪಡಿಸಿ, ಎಪ್ರಿಲ್ 10ರೊಳಗಾಗಿ ಕಚೇರಿಯ ವೇಳೆಯಲ್ಲಿ ನೇರವಾಗಿ ಸಲ್ಲಿಸಬಹುದಾಗಿದೆ. ನಿಗದಿತ ಅವಧಿಯ ನಂತರ ಬರುವ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೆಯುಡಬ್ಲ್ಯೂಜೆ ಪ್ರಶಸ್ತಿಗೆ ಯಾದಗಿರಿಯ ನಾಲ್ವರು ಪತ್ರಕರ್ತರ ಆಯ್ಕೆ : ಜಿಲ್ಲೆಯ ಹೆಮ್ಮೆ ಇಮ್ಮಡಿಸಿದ ಸಾಧನೆ



**ಯಾದಗಿರಿ:ಏ.2:**ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ನೀಡುವ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಯಾದಗಿರಿ ಜಿಲ್ಲೆಯ ನಾಲ್ವರು ಪತ್ರಕರ್ತರು ಆಯ್ಕೆಯಾಗಿರುವುದು ಜಿಲ್ಲೆಯ ಮಟ್ಟಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ಸಂಘದ ಅಧ್ಯಕ್ಷ ಮಲ್ಲಪ್ಪ ಸಂಕೀನ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಬೀದರನಲ್ಲಿ ಏಪ್ರಿಲ್ 11 ಮತ್ತು 12ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಹೇಳಿದರು. ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು ಪ್ರಶಸ್ತಿ ಪ್ರದಾನ ಮಾಡುವರು ಎಂದು ವಿವರಿಸಿದರು.

ಈ ಬಾರಿ ಪ್ರಶಸ್ತಿಗೆ ಪಾತ್ರರಾದವರಲ್ಲಿ ಮಲ್ಲಯ್ಯ ಪೋಲಂಪಲ್ಲಿ ಅವರಿಗೆ 'ಪಟೇಲ್ ಭೈರಹನುಮಯ್ಯ ಪ್ರಶಸ್ತಿ' (ಅತ್ಯುತ್ತಮ ಮಾನವೀಯ ವರದಿ), ಅಮರೇಶ ಹಿರೇಮಠ ಅವರಿಗೆ 'ಅಭಿಮಾನಿ ಪ್ರಕಾಶನ ಪ್ರಶಸ್ತಿ', ಬಸವರಾಜ ಕಟ್ಟಿಮನಿ ಅವರಿಗೆ 'ಗಿರಿಧರ್ ಪ್ರಶಸ್ತಿ' (ಅತ್ಯುತ್ತಮ ಅಪರಾಧ ವರದಿ) ಹಾಗೂ ಸಂಜೀವರಾವ್ ಕುಲಕರ್ಣಿ ಅವರಿಗೆ 'ಕೆಯುಡಬ್ಲ್ಯೂಜೆ ವಿಶೇಷ ಪ್ರಶಸ್ತಿ' ಲಭಿಸಿದೆ.

ಜಿಲ್ಲೆಯ ನಾಲ್ವರು ಪತ್ರಕರ್ತರ ಸಾಧನೆಯನ್ನು ಗುರುತಿಸಿ ರಾಜ್ಯ ಮಟ್ಟದಲ್ಲಿ ಗೌರವ ನೀಡಿರುವುದು ಯಾದಗಿರಿ ಜಿಲ್ಲೆಯ ಮಾಧ್ಯಮ ವಲಯಕ್ಕೆ ದೊಡ್ಡ ಪ್ರೋತ್ಸಾಹವಾಗಿದೆ. ವಿಶೇಷವಾಗಿ ಶಹಾಪುರ ತಾಲೂಕಿನ ಇಬ್ಬರು ಪತ್ರಕರ್ತರು ಪ್ರಶಸ್ತಿ ಪುರಸ್ಕೃತರಾಗಿರುವುದು ಸ್ಥಳೀಯ ಮಟ್ಟದಲ್ಲಿ ಹೆಮ್ಮೆಯನ್ನು ಹೆಚ್ಚಿಸಿದೆ.

ಸಣ್ಣ ಜಿಲ್ಲೆಯಾದರೂ ಪ್ರತಿಭೆಯಲ್ಲಿ ದೊಡ್ಡ ಹೆಜ್ಜೆ ಇಟ್ಟಿರುವ ಯಾದಗಿರಿ, ಪತ್ರಿಕೋದ್ಯಮ ಕ್ಷೇತ್ರದಲ್ಲೂ ತನ್ನದೇ ಗುರುತು ಮೂಡಿಸುತ್ತಿರುವುದು ಸಂತಸದ ವಿಷಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

# ದಿ.ಸೈಯದ್ ಇಕ್ಬಾಲ್ ಅಹ್ಮದ್ ಹೆಸರಿನಲ್ಲಿ ದತ್ತಿ ನಿಧಿ ನೀಡಿಕೆ: ಕಸಾಪದಿಂದ ಸನ್ಮಾನ



ಧೈರ್ಯದ ದಾರಿ

**ಮಾನ್ವಿ:**ಪಟ್ಟಣದ ಯುವ ಡಾಟ್ ಕಾಮ್ ಕಚೇರಿ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಭಾಷುಮಿಯ್ಯಾ ಸಾಹುಕಾರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಸೈಯದ್ ಮುಜೀಬ್ ಅಹ್ಮದ್ ಅವರು ಕನ್ನಡ ಪ್ರೇಮಿ, ಸಮಾಜ ಸೇವಕ, ರಾಜಕಾರಣಿ ಆಗಿದ್ದ ದಿ.ಸೈಯದ್ ಇಕ್ಬಾಲ್ ಅಹ್ಮದ್ ಹೆಸರಿನಲ್ಲಿ ಅಲ್ಪಸಂಖ್ಯಾತರ ಶಿಕ್ಷಣ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ವಿಷಯ ಕುರಿತು ಕನ್ನಡ ಸಾಹಿತ್ಯ ಪರಿಷತ್ತಿಗೆ 25 ಸಾವಿರ ರೂ.ಗಳ ದತ್ತಿ ನಿಧಿಯನ್ನು ತಾಕಸಾಪ ಅಧ್ಯಕ್ಷ ಶರಣಬಸವ ನೀರಮಾನ್ವಿಗೆ ಹಸ್ತಾಂತರಿಸಿದರು.

ಈವೇಳೆ ಮಾತನಾಡಿದಪ್ರಗತಿಪರ ಚಿಂತಕ, ಪತ್ರ ಕರ್ತ ಬಸವರಾಜ ಭೋಗಾವತಿ ಅವರು ದಿ.ಸೈಯದ್ ಇಕ್ಬಾಲ್ ಅಹ್ಮದ್ ಸಮಾಜಮುಖಿ ಸೇವಾ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ರಾಜಕಿ ಯ ಕ್ಷೇತ್ರದಲ್ಲಿ ಗುರುತಿಸಿಕೊಂಡು ಎಲ್ಲಾ ವರ್ಗದ ಸಾರ್ವಜನಿಕರಿಗೆ ಸಹಾಯ ಸಹಕಾರದನೆರವು ದೊರಕಿಸುವುದರ ಜೊತೆಗೆ ಅಲ್ಪಸಂಖ್ಯಾತ ವರ್ಗದ ಬಡಜನರಿಗೆ ಶಿಕ್ಷಣ ಒದಗಿಸಲುಶಾಲೆಗಳ ಪ್ರಾರಂಭಕ್ಕೆ ಮತ್ತು ಕಟ್ಟಡ ನಿರ್ಮಾಣ ಸೇರಿದಂತೆ ಅನೇಕ ಸೇವಾ ಕಾರ್ಯಗಳಲ್ಲಿ ತೊಡಗಿ ಸಿಕೊಂಡಿದ್ದ ಸ್ನೇಹಮಯಿ ವ್ಯಕ್ತಿ ನೆನೆಯಲು ಸಕಾರಣವಾಗಬಲ್ಲದು ಎಂದರು.

ಕಸಾಪ ಕೋಶಾಧ್ಯಕ್ಷ ಹೆಚ್.ಶರ್ಫುದ್ದೀನ್ ಪೋತ್ನಾಳ ಮಾತನಾಡಿ ಕನ್ನಡ ಸಾಹಿತ್ಯ ಪರಿಷತ್ತಿನ ಖಾಯಂ ವಾರ್ಷಿಕ ಕಾರ್ಯಕ್ರಮಗಳಿಗೆ ಮೂಲಾಧಾರವೆಂದರೆ ದತ್ತಿನಿಧಿಗಳು. ಈದತ್ತಿನಿಧಿಯನ್ನು ದತ್ತಿದಾನಿಗಳು ತಮ್ಮ ಹಿರಿಯರ ನೆನಪಿಗೆ ಅಥವಾ ತಮಗೆ ಉಪಕಾರ ಮಾಡಿದವರ ವಾರ್ಷಿಕ ಸ್ಮರಣೆಗೆ ಅಥವಾ ನಾಡು ನುಡಿಗಳ ಬಗ್ಗೆ ಈ ರೀತಿಯ ಕಾರ್ಯಕ್ರಮಗಳನ್ನು ನಡೆಸಬೇಕೆಂಬತಮ್ಮ ಆಶಯವಿದ್ದಂತೆ ಪರಿಷತ್ತಿನ ಸದಸ್ಯರು, ಹಿತೈಷಿಗಳು, ಸಾರ್ವಜನಿಕ ಗಣ್ಯರು, ಸಂಸ್ಥೆಗಳು ಶಾಶ್ವತ ಠೇವಣಿಯನ್ನು ಇಟ್ಟು ತಾವು ತಿಳಿಸಿದ ಪ್ರಕಾರ ಕಾರ್ಯಕ್ರಮಗಳನ್ನು ನಡೆಸಲು ವ್ಯವಸ್ಥೆ ಮಾಡುವುದು. ಹೀಗೆ ಪ್ರತಿವರ್ಷ ದತ್ತಿದಾನಿಗಳ ಆಶಯದಂತೆ ಕಾರ್ಯಕ್ರಮಗಳನ್ನು




ನಡೆಸುವುದು ದತ್ತಿ ಉಪನ್ಯಾಸ ಕಾರ್ಯಕ್ರಮವಾಗಿದೆ.

ಈ ನಿಟ್ಟಿನಲ್ಲಿದೆ.ಸೈಯದ್ ಇಸ್ಬಾಲ್ ಆಹ್ಮದ್ ಅವರ ನೆನಪಿಗಾಗಿ ಡಾ.ಸೈಯದ್ ಮುಜಿಬ್ ಆಹ್ಮದ್ ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ದತ್ತಿ ನಿಧಿ ನೀಡಿರುವುದು ಹೆಮ್ಮೆಯ ವಿಷಯ ಎಂದು ತಿಳಿಸಿದರು. ತಾಕಸಾಪ ಅಧ್ಯಕ್ಷ ಶರಣಬಸವ ನೀರಮಾನ್ವಿ ಮಾತನಾಡಿ ಜನಾನುರಾಗಿ ದಿ.ಸೈಯದ್ ಇಸ್ಟಾಲ್ ಆಹ್ಮದ್ ಹೆಸರಿನಲ್ಲಿ ದತ್ತಿದಾನ ನೀಡಿರುವುದು ತುಂಬಾ ಸ್ಪೂರ್ತಿದಾಯಕವಾದುದು ಇವರು ಕೈಗೊಂಡಿರುವ ಕೆಲಸ ಕಾರ್ಯಗಳು ಅಜರಾಮರವಾಗಿರಲಿ. ಕನ್ನಡ ಸಾಹಿತ್ಯ ಪರಿಷತ್ತಿಗೆ 9 ದತ್ತಿಗಳನ್ನು ಸಂಗ್ರಹಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಕಸಾಪ ಕೋಶಾಧ್ಯಕ್ಷ ಹೆಚ್.ಶರ್ಫುದ್ದೀನ್ ಪೋತ್ನಾಳ, ಡಾ.ಸೈಯದ್ ಮಿನಾಜುಲ್ ಹಸನ್, ಲಕ್ಷ್ಮಣ್ ಜಾನೇಕಲ್ ಗೌರವ ಕಾರ್ಯದರ್ಶಿ, ಹನುಮಂತ ಕೊಟ್ಟೆಕಲ್, ಅಧ್ಯಕ್ಷರು ಹೋಬಳಿ ಘಟಕ, ಸಬ್ಬಲಿ ಶಿಕ್ಷಕರು, ಸೈಯ್ಯದ್ ಹುಸೇನ್ ಸಾಹೇಬ್, ಮೊಹಮ್ಮದ್ ರಹಮತ್ ಅಲಿ, ಡಾ.ಸೈಯದ್ ಮುಜೀಬ್ ಆಹ್ಮದ್, ರಾಮು ಹೊಳೆಯಪ್ಪನವರ್, ಮಾರೆಪ್ಪ ದೊಡ್ಡಮನಿ, ಮಹೆಬೂಬ್ ಮದ್ಲಾಪುರು, ಎಸ್.ಎಚ್.ಮತವಾಲೆ, ಡಾ.ಚನ್ನಬಸವ ಮಾಡಗಿರಿ, ಡಾ.ಬಸವರಾಜ ಸುಂಕೇಶ್ವರ, ಚನ್ನಬಸವಮಾಡಗಿರಿ, ಮುನ್ವರ್ ಅಲಿ, ಮೋಹಿನ್, ಮಹ್ಮದ್ ರಫಿ, ಶಾಹಿದಗ ಹುಸೇನ್ ಖಾಜಿ, ಚಂದ್ರು, ಮಹಮ್ಮದ್ ರಫೀಕ್, ಬಾಬಾ ಮತವಾಲೇ, ರಾಜಸಾಬ್, ಎನ್.ಹೊಸೂರು, ಶೇಕ್ ಸಲ್ಮಾನ್, ರಾಜಾಸಾಬ್, ಶೇಕ್ಷಾವಲಿ, ಸೈಯದ್ ಆಕ್ರೋಜ್, ಅಸ್ಗರ ಅಲಿ, ಹೆಚ್.ಗೋಪಾಲ, ಬಿಲಾಲ್ ಸೇರಿದಂತೆ ಅನೇಕರಿದ್ದರು.

# ಇತಿಹಾಸ ಪ್ರಸಿದ್ಧ ಕರಗ ಉತ್ಸವ ಸಂಪನ್ನ



**ಬೆಂಗಳೂರು.ಏ.2**-ವಿಶ್ವ ವಿಖ್ಯಾತ ಐತಿಹಾಸಿಕ ಕರಗ ಮಹೋತ್ಸವವು ಶಾಸ್ತ್ರೋಕ್ತವಾಗಿ ಸಮಾಪ್ತಿಯಾಗಿದೆ. ಕಳೆದ ರಾತ್ರಿ 2.10 ಗಂಟೆಗೆ ಕರಗ ಮಹೋತ್ಸವಕ್ಕೆ ವಿಜೃಂಭಣೆಯಿಂದ ವಿದ್ಯುಕ್ತ ಚಾಲನೆ ದೊರೆತಿದ್ದು, ಬಿಬಿಎಂಪಿ, ಪೊಲೀಸ್ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾಡಳಿತದ ಸಮರ್ಪಕ ಸಿದ್ಧತೆಗಳ ನಡುವೆ ಯಶಸ್ವಿಯಾಗಿ ನೆರವೇರಿತು.

ಈ ಬಾರಿ ಕರಗ ಉತ್ಸವದಲ್ಲಿ ಸುಮಾರು 10 ಲಕ್ಷಕ್ಕೂ ಅಧಿಕ ಭಕ್ತರು ಭಾಗವಹಿಸಿ ದೇವಿಯ ದರ್ಶನ ಪಡೆದರು. ಐತಿಹಾಸಿಕ ಬೆಂಗಳೂರು ಧರ್ಮರಾಯಸ್ವಾಮಿ ದ್ರೌಪದಿ ಕರಗ ಉತ್ಸವ ಈ ವರ್ಷವೂ ಅದ್ದೂರಿಯಾಗಿ ಜರುಗಿದ್ದು, ಕಳೆದೊಂದು ವಾರದಿಂದ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಿದ್ದವು. ಧರ್ಮರಾಯಸ್ವಾಮಿ ದೇವಸ್ಥಾನವು ನವವಧುವಿನಂತೆ ಅಲಂಕರಿಸಿಕೊಂಡು ಕಂಗೊಳಿಸುತ್ತಿತ್ತು.

ಕರಗ ಸಾಗಿದ ಮಾರ್ಗದ ಮೂಲಕ ಭಕ್ತರು ರಾತ್ರಿ ಪೂರ್ತಿ ಜಾಗರಣೆ ಮಾಡಿ ದೇವಿಯನ್ನು ಕಣ್ತುಂಬಿಕೊಂಡರು. ಈ ಬಾರಿಯೂ ಜ್ಞಾನೇಂದ್ರ ಅವರು ಕರಗ ಹೊತ್ತಿದ್ದು, ಯಾವುದೇ ಅಡ್ಡಿ ಆತಂಕಗಳಿಲ್ಲದೆ ಉತ್ಸವ ಸುಸೂತ್ರವಾಗಿ ನೆರವೇರಿತು.

ಧರ್ಮರಾಯಸ್ವಾಮಿ ದೇವಸ್ಥಾನದಿಂದ ಮಧ್ಯರಾತ್ರಿ 2.10ಕ್ಕೆ ಹೊರಟ ಕರಗವು ವಿವಿಧ ಪೇಟೆಗಳನ್ನು ಸುತ್ತಿ, ಮಸ್ತಾನ್ ಷಾ ದರ್ಗಾ, ಅಣ್ಣಮ್ಮ ದೇವಸ್ಥಾನ ಸೇರಿದಂತೆ ಒಟ್ಟು 26 ದೇವಸ್ಥಾನಗಳಿಗೆ ದರ್ಶನ ನೀಡಿ ಇಂದು ಬೆಳಿಗ್ಗೆ 9.50ಕ್ಕೆ ಮರಳಿ ದೇವಸ್ಥಾನಕ್ಕೆ ಆಗಮಿಸಿತು.

ಒಟ್ಟಾರೆ, ಈ ಬಾರಿಯ ಬೆಂಗಳೂರು ಕರಗ ಮಹೋತ್ಸವ ಭಕ್ತಿಭಾವ ಮತ್ತು ಸಂಭ್ರಮದ ನಡುವೆ ಅದ್ದೂರಿಯಾಗಿ ಜರುಗಿದ್ದು, ಲಕ್ಷಾಂತರ ಭಕ್ತರು ದ್ರೌಪದಿ ಕರಗವನ್ನು ಕಣ್ತುಂಬಿಕೊಂಡರು.

## ಎಸಿ ಕೋಚ್‌ನಲ್ಲೇ ಬಂಗಾರ ಮತ್ತು ನಗದು ಕಳ್ಳತನ: ಪ್ರಕರಣ ದಾಖಲಿಸಲು ವಿಳಂಬ ಆರೋಪ

**ಯಾದಗಿರಿ, ಎ.1:** ಎಸಿ ಕೋಚ್‌ನಲ್ಲಿ ಬಂಗಾರ ಹಾಗೂ ನಗದು ಕಳ್ಳತನವಾದ ಘಟನೆಗೆ ಸಂಬಂಧಿಸಿ ರೈಲ್ವೆ ಅಧಿಕಾರಿಗಳ ನಡೆ ಬಗ್ಗೆ ಪ್ರಶ್ನೆಗಳು ಎದ್ದಿವೆ.

ಯಾದಗಿರಿ ಜಿಲ್ಲೆಯ ಮುದ್ನಾಳ ಉಮಾಲ್ ನಾಯಕ್ ತಂಡದ ಲಲಿತಾ ಪವರ್ ಮತ್ತು ಅವರ ಪತಿ ರಮೇಶ್ ರಾಮು ಪವರ್ ಅವರು ಮುಂಬೈಯಿಂದ ನಾಗರಕೋಲ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಯಾದಗಿರಿಗೆ ಪ್ರಯಾಣಿಸುತ್ತಿದ್ದರು. ಬಿ3 ಕೋಚ್‌ನ 66 ಮತ್ತು 71 ಆಸನಗಳಲ್ಲಿ ಪ್ರಯಾಣಿಸುತ್ತಿದ್ದ ವೇಳೆ, ರಾತ್ರಿ ನಿದ್ರೆಯಲ್ಲಿದ್ದಾಗ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದೆ.

ಬೆಳಗಿನ ಜಾವ ಸುಮಾರು 3 ಗಂಟೆ ಸುಮಾರಿಗೆ ಲಲಿತಾ ಪವರ್ ಅವರ ಒಂದುವರೆ ತೊಲೆ ಬಂಗಾರ ಹಾಗೂ 5,000 ನಗದು ಹಣ ಕಳವುಗೊಂಡಿರುವುದು ಗಮನಕ್ಕೆ ಬಂದಿದೆ. ಎಸಿ ಕೋಚ್‌ನಲ್ಲೇ ಇಂತಹ ಕಳ್ಳತನ ನಡೆದಿರುವುದು ಆಶ್ಚರ್ಯಕರವಾಗಿದೆ ಎಂದು ಪತಿ ರಮೇಶ್



ರಾಮು ಪವರ್ ತಿಳಿಸಿದ್ದಾರೆ.

ಘಟನೆಯ ನಂತರ ಯಾದಗಿರಿ ರೈಲ್ವೆ ಠಾಣೆಗೆ ದೂರು ನೀಡಲು ಪ್ರಯತ್ನಿಸಿದಾಗ, ಅಲ್ಲಿನ ಅಧಿಕಾರಿಗಳು ಪ್ರಕರಣ ದಾಖಲಿಸದೆ ವಾಡಿ ರೈಲ್ವೆ ಸ್ಟೇಷನಲ್ಲಿ ದೂರು ನೀಡುವಂತೆ ಸೂಚಿಸಿದ್ದಾಗಿ ಪೀಡಿತರು ಆರೋಪಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ವಾಡಿ ಜಂಕ್ಷನ್‌ನಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ. ಎಸಿ ಕೋಚ್‌ನಲ್ಲೇ ಕಳ್ಳತನ ನಡೆದಿರುವುದು ಮತ್ತು ಪ್ರಾಥಮಿಕ ಹಂತದಲ್ಲೇ ದೂರು ಸ್ವೀಕರಿಸಲು ವಿಳಂಬವಾದುದು ಪ್ರಯಾಣಿಕರ ಸುರಕ್ಷತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಬಂಗಾರ ಮತ್ತು ನಗದು ಕಳೆದುಕೊಂಡ ದಂಪತಿ ದಿಗ್ಭ್ರಮೆಗೆ ಒಳಗಾಗಿದ್ದು, ಕುಟುಂಬಸ್ಥರು ಆತಂಕದಲ್ಲಿದ್ದಾರೆ.

## ಎಲ್ ಪಿ ಜಿ ಗ್ಯಾಸ್ ಗಾಗಿ ಆಟೋ ಚಾಲಕರ ಪರದಾಟ



**ಬಳ್ಳಾರಿ, ಏ.2:** ನಗರದಲ್ಲಿ ಆಟೋ ಎಲ್ಪಿಜಿ ಗ್ಯಾಸ್ ಸಮಸ್ಯೆ ತೀವ್ರಗೊಂಡಿದೆ. ಕಿಲೋ ಮೀಟರ್ ಗಟ್ಟಲೆ ಸಾಲುಗಟ್ಟಿ 3-4 ತಾಸು ನಿಂತಿವೆ ಅಟೋಗಳು. ನಗರದ ಆರು ಎಲ್ಪಿಜಿ ಬಂಕ್ ಗಳ ಪೈಕಿ ಎರಡು ಬಂಕ್ ಮಾತ್ರ ವರ್ಕ್ ಮಾಡ್ತಿವೆ.ಎಲ್ಪಿಜಿ ತುಂಬಿಸೋಕೆ ಇಷ್ಟೊಂದು ಟೈಂ ವೇಸ್ಟ್ ಮಾಡಿದ್ರೇ ನಾವು ಇನ್ನೂ ಗ್ರಾಹಕರನ್ನು ಹುಡುಕುದು ಯಾವಾಗ. ಈ ಮಧ್ಯೆ ನಿನ್ನೆ 84 ರೂಪಾಯಿ ಇದ್ದ ಎಲ್ಪಿಜಿ ದರ ಇಂದು 94 ರೂಪಾಯಿ ಏರಿಕೆಯಾಗಿದೆ. ಗ್ರಾಹಕರು ನಮಗೆ ನೀಡೋ ಹಣದಲ್ಲಿ ಯಾವುದೇ ಹೆಚ್ಚುವರಿ ನೀಡ್ತಿಲ್ಲ ಹೀಗಾಗಿ ನಿತ್ಯ ಆಟೋ ಓಡಿಸೋದಾದ್ರು ಹೇಗೆ ಅನ್ನೋ ಪ್ರಶ್ನೆ ಆಟೋ ಚಾಲಕರದ್ದಾಗಿದೆ.

# ಪರವಾನಿಗೆ ಭೂಮಾಪಕರ ಪ್ರತಿಭಟನೆ: ಸೇವೆ ಸ್ಥಗಿತದಿಂದ ರೈತರ ಸಂಕಷ್ಟ ತೀವ್ರ



**ಯಾದಗಿರಿ:ಏ.2:** ಜಿಲ್ಲೆಯಲ್ಲಿ ಪರವಾನಿಗೆ ಭೂಮಾಪಕರು ಕಳೆದ ಒಂದು ತಿಂಗಳಿಂದ ಸೇವೆ ಸ್ಥಗಿತಗೊಳಿಸಿ ಪ್ರತಿಭಟನೆಯಲ್ಲಿ ತೊಡಗಿರುವ ಪರಿಣಾಮ, ರೈತರಿಗೆ ತೀವ್ರ ಸಂಕಷ್ಟ ಉಂಟಾಗಿದೆ. ಬೇಸಿಗೆ ಕಾಲದಲ್ಲೇ ಜಮೀನು ಸರ್ವೇ ಕಾರ್ಯಗಳು ನಡೆಯದ ಸ್ಥಿತಿ ನಿರ್ಮಾಣವಾಗಿದ್ದು, ರೈತರು ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಎದುರಾಗಿದೆ. ಈ ಹಿನ್ನೆಲೆದಲ್ಲಿ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಕಾರ್ಮಿಕ ಸೇನೆ ಜಿಲ್ಲಾಧ್ಯಕ್ಷ ಪೋಲಪ್ಪ ಎಂ. ನಾರಾಯಣ್ಣೋರ್ ಅವರು ಬುಧವಾರ ಜಿಲ್ಲಾಧಿಕಾರಿಗಳ ಮುಖಾಂತರ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಅವರು, "ಜಿಲ್ಲೆಯ ಪರವಾನಿಗೆ ಭೂಮಾಪಕರು ಲಾಗಿನ್ ವ್ಯವಸ್ಥೆಯನ್ನು ಬಂದ್ ಮಾಡಿ ನಿರಂತರ ಪ್ರತಿಭಟನೆ ನಡೆಸುತ್ತಿರುವುದರಿಂದ ಭೂ ಇಲಾಖೆಯ ಕಾರ್ಯಗಳು ಸಂಪೂರ್ಣ ಸ್ಥಗಿತಗೊಂಡಿವೆ. ಇದರ ಪರಿಣಾಮವಾಗಿ ರೈತರ ಜಮೀನಿನ ಸಂಬಂಧಿತ ಕೆಲಸಗಳು ನಡೆಯದೇ, ಗ್ರಾಮಗಳಿಂದ ಬರುವ ರೈತರು ಸಂಕಷ್ಟ ಅನುಭವಿಸಿ ಹಿಂತಿರುಗುತ್ತಿದ್ದಾರೆ. ಇದು ಖಂಡನೀಯ," ಎಂದು ಆಕ್ರೋಶ ವ್ಯಕ್ತಪಡಿಸಿದರು.
ಪ್ರತಿ ಜಮೀನು ವ್ಯವಹಾರವೂ ಭೂ ಇಲಾಖೆಯ ಮೇಲೆ ಅವಲಂಬಿತವಾಗಿರುವುದರಿಂದ, ಭೂಮಾಪಕರ ಸೇವೆ ಸ್ಥಗಿತದಿಂದ ರೈತರಿಗೆ ದೊಡ್ಡ ಹೊಡೆತ ಬಿದ್ದಿದೆ. ತೀವ್ರ ಬಿಸಿಲಿನ ನಡುವೆಯೂ ರೈತರು ಜಿಲ್ಲಾ ಕೇಂದ್ರಕ್ಕೆ ಆಗಮಿಸಿ ಕೆಲಸ ಆಗದೆ ನಿರಾಶೆಯಿಂದ ಹಿಂತಿರುಗುತ್ತಿರುವುದು ನೋವುಂಟುಮಾಡುವ ವಿಚಾರ ಎಂದು ಅವರು ಹೇಳಿದರು.

"ರೈತರ ಈ ತೊಂದರೆ ತಕ್ಷಣ ಪರಿಹಾರವಾಗಬೇಕು. ಸಂಬಂಧಪಟ್ಟ ಅಧಿಕಾರಿಗಳು ಒಂದು ವಾರದೊಳಗೆ ಲಾಗಿನ್ ವ್ಯವಸ್ಥೆಯನ್ನು ಪುನರಾರಂಭಿಸಿ, ಭೂ ಸೇವೆಗಳನ್ನು ಸರಾಗವಾಗಿ ನಡೆಸುವಂತೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಜಿಲ್ಲಾಧಿಕಾರಿ ಕಚೇರಿ ಎದುರು ಉಗ್ರ ಹೋರಾಟ ನಡೆಸಬೇಕಾಗುತ್ತದೆ," ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ. ಮಲ್ಲಿಕಾರ್ಜುನ ಹುಲಿಬೆಟ್ಟ, ನ್ಯಾಯವಾದಿ ನಿಂಗಪ್ಪ ದಳವಾಯಿ, ಮೋನೇಶ್ ನಾರಾಯಣ್ಣೋರ್, ನರಸಿಂಹ ಜೋಳದಡಿಗಿ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಕೋಡ್ಲಾ ಶ್ರೀ ಉರಿಲಿಂಗಪೆದ್ದಿಶ್ವರ ಮಹಾಸಂಸ್ಥಾನ ಮಠದಲ್ಲಿ ಜಾತ್ರಾ ಮಹೋತ್ಸವ ಇಂದಿನಿಂದ ಆರಂಭ



**ಸೇಡಂ,ಏ, 02:** ತಾಲೂಕಿನ ಸುಕ್ಷೇತ್ರ ಕೋಡ್ಲಾ ಗ್ರಾಮದಲ್ಲಿರುವ ಶ್ರೀ ಉರಿಲಿಂಗಪೆದ್ದಿಶ್ವರ ಮಹಾಸಂಸ್ಥಾನ ಮಠದ ಶ್ರೀ ಶಿವಯೋಗೀಶ್ವರರ 78ನೇ ಪುಣ್ಯಸ್ಮರಣೆ ಹಾಗೂ 46ನೇ ಜಾತ್ರೋತ್ಸವ ಏ.4ರಂದು ನಡೆಯಲಿದೆ ಎಂದು ಕೋಡ್ಲಾ-ಮೈಸೂರು ಶ್ರೀ ಉರಿಲಿಂಗ ಪೆದ್ದೀಶ್ವರ ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಜ್ಞಾನಪ್ರಕಾಶ ಮಹಾಸ್ವಾಮೀಜಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು,ಜಾತ್ರೆ ನಿಮಿತ್ತ ಗುರುವಾರದಿಂದ ಏ.4ರವರೆಗೆ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ.ಗುರುವಾರ ಬೆಳಗ್ಗೆ 8ಕ್ಕೆ ಷಟಸ್ಥಲ ಧ್ವಜಾರೋಹಣ ನಡೆಯಲಿದ್ದು, ಕೋಡ್ಲಾ ಶಂಭುಲಿಂಗೇಶ್ವರ ವಿರಕ್ತ ಮಠದ ಶ್ರೀ ಶಂಭುಲಿಂಗೇಶ್ವರ ಸ್ವಾಮೀಜಿ, ಚಿತ್ರದುರ್ಗದ ಶ್ರೀ ಬಸವನಾಗಿದೇವ ಸ್ವಾಮೀಜಿ ಉಪಸ್ಥಿತರಿರಲಿದ್ದಾರೆ. ಶುಕ್ರವಾರ ಮಧ್ಯಾಹ್ನ 2ಕ್ಕೆ ವಚನಗೋಷ್ಠಿ, ಕವಿಗೋಷ್ಠಿ ನಡೆಯಲಿದೆ. ಚಿತ್ರದುರ್ಗದ ಶ್ರೀ ಬಸವನಾಗಿದೇವ ಸ್ವಾಮೀಜಿ, ಶ್ರೀ ಸಿದ್ಧರಾಮ ಶಿವಯೋಗಿ , ಮಹಾದೇವ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸ್ವಾಮೀಜಿ, ಮುಡಬಿ ಗುಂಡೇರಾವ್, ತಿಪ್ಪಯ್ಯ ದೇವನೂರ ಭಾಗವಹಿಸಲಿದ್ದಾರೆ. ಸಂಜೆ 5.15ಕ್ಕೆ ಬಸ್ ನಿಲ್ದಾಣ ಪಕ್ಕದಲ್ಲಿರುವ ಬಸವೇಶ್ವರ ಮೂರ್ತಿಯಿಂದ ಉರಿಲಿಂಗ ಪೆದ್ದೀಶ್ವರ ಮಠದವರೆಗೆ ಶ್ರೀ ಶಿವಯೋಗೀಶ್ವರ ಭವ್ಯ ಮೆರವಣಿಗೆ ನಡೆಯಲಿದೆ ಎಂದು ಹೇಳಿದ್ದಾರೆ. ಏ.4ರಂದು ಸಂಜೆ 6.30ಕ್ಕೆ ಗುರಮಠಕಲ್ ಖಾಸಾ ಮಠದ ಶ್ರೀ ಶಾಂತವೀರ ಮುರುಘರಾಜೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ಕುಂಭಮೇಳ, ಪಲ್ಲಕ್ಕಿ ಮೆರವಣಿಗೆ, ಭಜನೆ, ಪುರವಂತರ ಸೇವೆಯೊಂದಿಗೆ ಭವ್ಯ ರಥೋತ್ಸವ ಜರುಗಲಿದೆ. 7.15ಕ್ಕೆ ಶರಣ ತತ್ವ ದರ್ಶನ ಹಾಗೂ ಸಮಾನತೆ ಸಮಾವೇಶ ನಡೆಯಲಿದೆ. ಭಾಲ್ಕಿಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು, ಶ್ರೀ ಬಸವರಾಜ ಪಟ್ಟದಾರ್ಯ ಸ್ವಾಮೀಜಿ, ಶ್ರೀ ಶಾಂತವೀರ ಮುರುಘರಾಜೇಂದ್ರ ಸ್ವಾಮೀಜಿ, ಸಚಿವರಾದ ಡಾ.ಶರಣಪ್ರಕಾಶ ಪಾಟೀಲ್, ಪ್ರಿಯಾಂಕ್ ಖರ್ಗೆ, ಸಂಸದ ರಾಧಾಕೃಷ್ಣ ದೊಡ್ಡಮನಿ, ಶಾಸಕ ಪ್ರಸಾದ ಅಬ್ಬಯ್ಯ ಸೇರಿ ಹಲವರು ಭಾಗಿಯಾಗಲಿದ್ದಾರೆ. ರಾತ್ರಿ 8.30ಕ್ಕೆ ಸಾಣೆಹಳ್ಳಿಯ ಶಿವಕುಮಾರ ಕಲಾ ಸಂಘ ಅಭಿನಯದ ಶರಣ ಉರಿಲಿಂಗ ಪೆದ್ದಿ ನಾಟಕ ಪ್ರದರ್ಶನ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

# ಬಸ್-ಬೈಕ್ ಮುಖಾಮುಖಿ ಡಿಕ್ಕಿ:ಸ್ಥಳದಲ್ಲೇ ಯುವಕ ಸಾವು



**ವಿಜಯಪುರ, ಏ.2:**ಬಸ್ ಹಾಗೂ ಬೈಕ್ ಮಧ್ಯೆ ಮುಖಾಮುಖಿ ಡಿಕ್ಕಿ ಸಂಭವಿಸಿ ಸ್ಥಳದಲ್ಲಿಯೇ ಯುವಕನೋರ್ವ ಮೃತಪಟ್ಟ ಘಟನೆ ಜಿಲ್ಲೆಯ ಸಿಂದಗಿ ತಾಲೂಕಿನ ಕನ್ನೊಳ್ಳಿ ಟೋಲ್ ಗೇಟ್ ಬಳಿ ಮಂಗಳವಾರ ನಡೆದಿದೆ.
ಇದೇ ವೇಳೆ ಘಟನೆಯಲ್ಲಿ ಬಸ್, ಬೈಕ್ ಸುಟ್ಟು ಕರುಕಲಾಗಿದೆ.ಸಿಂದಗಿ ಪಟ್ಟಣದ ಅಭಿಷೇಕ ಸಾಹೇಬಗೌಡ ನಾಗರಾಳ(19) ಮೃತ ಯುವಕ.
ವಿಜಯಪುರದಿಂದ ಬರುತ್ತಿದ್ದ ಬಸ್ ಸಿಂದಗಿಯಿಂದ ವಿಜಯಪುರ ಕಡೆ ಹೊರಟಿದ್ದ ಬೈಕ್ ಮಧ್ಯೆ ಡಿಕ್ಕಿ ಸಂಭವಿಸಿ ಎರಡು ವಾಹನಗಳು ಸುಟ್ಟು ಕರುಕಲಾಗಿವೆ. ಯುವಕನ ಮೃತದೇಹ ಸಹ ಭಾಗಶಃ ಸುಟ್ಟಿದೆ.
ಸಿಂದಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

# ಕ್ರೀಡಾ ಮನೋಭಾವ ಜೀವನ ಗೆಲುವಿನ ದಾರಿ: ಶರಣಪ್ಪ ಮಾನೇಗಾರ ಯರಗೋಳ

**ಯಾದಗಿರಿ:ಏ.2:** ಗ್ರಾಮೀಣ ಯುವಕರಲ್ಲಿ ಕ್ರೀಡಾ ಚೈತನ್ಯ ಮೂಡಿಸುವ ನಿಟ್ಟಿನಲ್ಲಿ ಯರಗೋಳ ಗ್ರಾಮದಲ್ಲಿ ಪ್ರೀಮಿಯರ್ ಲೀಗ್-5 ಕ್ರಿಕೆಟ್ ಟೂರ್ನಮೆಂಟ್ ಸಂಭ್ರಮದಿಂದ ಆರಂಭಗೊಂಡಿತು. ಟೂರ್ನಿಗೆ ಚಾಲನೆ ನೀಡಿ ಮಾತನಾಡಿದ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯರಾದ ಶರಣಪ್ಪ ಮಾನೇಗಾರ ಯರಗೋಳ, ಕ್ರೀಡೆಗಳು ವ್ಯಕ್ತಿತ್ವ ವಿಕಾಸಕ್ಕೆ ಮಹತ್ವದ ಪಾತ್ರವಹಿಸುತ್ತವೆ ಎಂದು ಹೇಳಿದರು.

ಕ್ರೀಡೆಗಳಲ್ಲಿ ಭಾಗವಹಿಸುವುದು ಕೇವಲ ಗೆಲುವಿಗಾಗಿ ಅಲ್ಲ, ಬದುಕಿನ ಪಾಠಗಳನ್ನು ಕಲಿಯುವ ಅವಕಾಶವೂ ಆಗಿದೆ. ಮೈದಾನದಲ್ಲಿ ಕಂಡುಬರುವ ಶ್ರಮ, ನಿಯಮಬದ್ಧತೆ ಮತ್ತು ತಂಡ ಮನೋಭಾವವೇ ಜೀವನದ ಸವಾಲುಗಳನ್ನು ಎದುರಿಸಲು ನೆರವಾಗುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

ಗ್ರಾಮೀಣ ಭಾಗದ ಯುವಕರಲ್ಲಿ ಅಪಾರ ಪ್ರತಿಭೆ ಅಡಗಿದ್ದು, ಇಂತಹ ಕ್ರೀಡಾ ವೇದಿಕೆಗಳು ಅವರನ್ನು ಹೊರತರುವಲ್ಲಿ ಸಹಾಯಕವಾಗುತ್ತವೆ. ಇಂದಿನ ಯುವಪೀಳಿಗೆ ಕ್ರೀಡೆಯ ಮೂಲಕ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿ, ರಾಜ್ಯ ಮತ್ತು ದೇಶ ಮಟ್ಟದಲ್ಲಿ ಹೆಸರು ಮಾಡಬೇಕೆಂದು ಅವರು ಕರೆ ನೀಡಿದ ಅವರು ಸ್ಪರ್ಧಾತ್ಮಕ ಆಟವು ಗ್ರಾಮದಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿತು. ಇನ್ನೂ
ಈ ಸಂದರ್ಭದಲ್ಲಿ ಯಾದಗಿರಿ ನಗರ ಸಭೆ ಮಾಜಿ ಅಧ್ಯಕ್ಷ ಶಶಿಧರರೆಡ್ಡಿ ಗೌಡ



ಹೊಸಳ್ಳಿ , ಪರಶುರಾಮ್ ಚವಾಣ್, ಚಂದ್ರರೆಡ್ಡಿ ಬಂದಳ್ಳಿ, ಸುರೇಶ ಅಲ್ಲಿಪುರ, ಶರಣಪ್ಪ ಮೊಟ್ನಳ್ಳಿ,ಹನುಮಂತ ದೊಡ್ಡಮನಿ, ದೇವಪ್ಪ ಗೌಡ ರಾಚನಹಳ್ಳಿ, ವೀರೇಶ್ ಸಜ್ಜನ್, ರಾಜೂಗೌಡ ಅರಿಕೇರಿ, ಬಸವಲಿಂಗಪ್ಪ ನಾಯಕ್,ವಿನಯ್ ರಾಕಾ, ಆಂಜನೇಯ ಕಟ್ಟಿಮನಿ, ಭೀಮಶ್ಯ ಗೋಡಿಕರ, ಹನಮಂತ ತಳವಾರ, ವೀರೇಶ್ ಗೌಡ, ಸಾಹೇಬ ಗೌಡ ಗಮಾಪಲ್ಲಿ, ಸಾಬಣ್ಣ ಕೋಲ್ಕರ್ , ಚಂದ್ರಪ್ಪ ಇದ್ದಿಲಿ, ಮಂಜುನಾಥ ಮಲ್ಹಾರ, ದೇವಿಂದ್ರಪ್ಪ ಬನಾ ಸೇರಿದಂತೆ ಊರಿನ ಗಣ್ಯರು ಉಪಸ್ಥಿತರಿದ್ದರು..

# ಮದುವೆ ದಿಬ್ಬಣದಲ್ಲಿ ಮನಸೂರೆಗೊಂಡ ದೇಶಿ ಕ್ರೀಡೆ





ಧೈರ್ಯದ ದಾರಿ

**ಮಾನ್ವಿ :** ಪಟ್ಟಣದ ದಿಗಂಬರವಾದೂತ ಶ್ರೀ ಅನ್ನಮಯ್ಯ ತಾತನ ದೇವಸ್ಥಾನದಲ್ಲಿ ಕಗ್ಗೇಲಿ ಬಂದುಗಳ ಮದುವೆ ಸಮಾರಂಭ ಕಾರ್ಯಕ್ರಮದಲ್ಲಿ ವಿನೂತನವಾಗಿ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಬೆಳಗಿನ ಪೇಟೆಯ ನವ ವದು ವರರು ವಿಶೇಷವಾಗಿ ಮದುವೆ ಸಮಾರಂಭದಲ್ಲಿ ದೇಶಿ ಕ್ರೀಡೆಯುನ್ನು ಏರ್ಪಡಿಸಿ ಅಚ್ಚರಿ ಮೂಡಿಸಿದರು.

ಪ್ರಥಮ ಬಹುಮಾನ 5000 ರೂ. ಹಾಗೂ ದ್ವಿತೀಯು ಬಹುವಾನ 3000 ರೂ. ಆಯೋಜಿಸಲಾಗಿತ್ತು. ಇದರಲ್ಲಿ ಪ್ರಥವು ಬಹುವಾನವನ್ನು ಗೋವಿಂದ ಬಿಜನಿಗೇರಿ ಪಡೆದುಕೊಂಡರೆ ದ್ವಿತೀಯ ಬಹುಮಾನವನ್ನು ಶಿವರಾಜ್ ಮಲ್ಲಾಪುರು ಮತ್ತು ಶರೀಪ್ ಕುರ್ಡಿಯವರು ಪಡೆದುಕೊಂಡರು.ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ರಾಯಚೂರು ಜಿಲ್ಲೆಯ ಸುತ್ತಮುತ್ತಲಿನ ಗ್ರಾಮದ ಯುವಕರು ಭಾಗವಹಿಸಿ ದೇಶಿ ಕ್ರೀಡೆಯನ್ನು ಯಶಶ್ವಿಗೊಳಿಸಿದರು.

ಈ ಸಂದರ್ಭದಲ್ಲಿ ರಾಮಣ್ಣ ನಾಯಕ ಜಿಲ್ಲಾಧ್ಯಕ್ಷರು ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ರಾಯಚೂರು, ನಾಯ್ಡು ನಾಯಕ, ದೇವರಾಜ ನಾಯಕ ತಾಲೂಕಾಧ್ಯಕ್ಷರು ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಮಾನ್ವಿ, ಕೊಂಡಯ್ಯ ನಾಯಕ ತಾ. ಪ್ರಧಾನ ಕಾರ್ಯದರ್ಶಿ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಮಾನ್ವಿ, ರಂಗಪ್ಪ ನಾಯಕ ಉಪಾಧ್ಯಕ್ಷರು, ಹಂಪಯ್ಯ ನಾಯಕ, ತಾಯಣ್ಣ, ರಮೇಶ, ವಿಶ್ವನಾಥ್, ದೇವರಾಜ, ರಾಮಣ್ಣ ಚಿರತಪಲ್ಲಿ ಹಾಗೂ ಯುವಕರು ಉಪಸ್ಥಿತರಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ಪ್ರೊ.ಆರ್.ಆರ್.ಬಿರಾದಾರ ಅವರಿಗೆ ಪಿಎಚ್.ಡಿ ಪದವಿ ಪ್ರದಾನ



**ಕಲಬುರಗಿ,ಏ.2**-ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ.ಆರ್.ಆರ್. ಬಿರಾದಾರ ಅವರಿಗೆ ಮಾ.28 ರಂದು ಮಂಗಳೂರು ವಿಶ್ವವಿದ್ಯಾಲಯದ 44ನೇ ಘಟಿಕೋತ್ಸವದಲ್ಲಿ ಎರಡನೇ ಪಿಎಚ್.ಡಿ ಪದವಿ ಪ್ರಮಾಣಪತ್ರವನ್ನು ಕರ್ನಾಟಕ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಪ್ರದಾನ ಮಾಡಿದರು.

ಪ್ರೊ.ಬಿರಾದಾರ ಅವರು "ಕೋಶೀಯ ಕಾರ್ಯನಿರ್ವಹಣೆ ಮತ್ತು ಆರ್ಥಿಕ ಅಭಿವೃದ್ಧಿಯ ಮೇಲೆ ಕೋಶೀಯ ನೀತಿ ಸುಧಾರಣೆಗಳ ಪರಿಣಾಮ: ಭಾರತದ ಪ್ರಮುಖ ರಾಜ್ಯಗಳ ಒಂದು ವಿಶ್ಲೇಷಣೆ; ಎಂಬ ವಿಷಯದ ಮೇಲೆ ತಮ್ಮ ಪಿಎಚ್.ಡಿ ಪೂರ್ಣಗೊಳಿಸಿದ್ದಾರೆ.

ಈ ಸಂಶೋಧನೆಯನ್ನು ಧಾರವಾಡದ ಸಿಎಂಡಿಆರ್‌ನ ಪ್ರೊ.ನಯನತಾರ ಎಸ್. ನಾಯಕ್ ಅವರ ಮಾರ್ಗದರ್ಶನದಲ್ಲಿ ಪೂರ್ಣಗೊಳಿಸಲಾಗಿದೆ. ಪ್ರೊ. ಬಿರಾದಾರ ಅವರ ಸಂಶೋಧನೆಯಲ್ಲಿ, ಕೋಶೀಯ ಸುಧಾರಣೆ

ಮತ್ತು ಬಜೆಟ್ ನಿರ್ವಹಣಾ (ಎಸ್‌ಆರ್‌ಬಿಎಮ್) ಕಾಯ್ದೆ ಜಾರಿಯಾದ ನಂತರ ಸಾಮಾನ್ಯ ಸರ್ಕಾರ (ಕೇಂದ್ರ ಮತ್ತು ರಾಜ್ಯ)ದ ಒಟ್ಟು ವೆಚ್ಚದ ವಾರ್ಷಿಕ ಬೆಳವಣಿಗೆ ದರಲ್ಲಿ ಹೆಚ್ಚಾಗಿದೆ ಎಂದು ಕಂಡುಬಂದಿದೆ. ವಿಶೇಷವಾಗಿ, ಆದಾಯ ವೆಚ್ಚಕ್ಕಿಂತ ಬಂಡವಾಳ ವೆಚ್ಚದಲ್ಲಿ ಹೆಚ್ಚು ಏರಿಕೆ ಕಂಡುಬಂದಿದೆ. ಈ ಏರಿಕೆ ರಾಜ್ಯ ಸರ್ಕಾರಗಳಿಗಿಂತ ಕೇಂದ್ರ ಸರ್ಕಾರದ ಮಟ್ಟದಲ್ಲಿ ಹೆಚ್ಚು ಸ್ಪಷ್ಟವಾಗಿ ಕಂಡುಬಂದಿದೆ.

ಇವರ ಅಧ್ಯಯನದ ಪ್ರಕಾರ, ಆದಾಯ ವೆಚ್ಚವು ಜಿಡಿಪಿ ಮೇಲೆ ನಕಾರಾತ್ಮಕ ಪರಿಣಾಮ ಬೀರಿದರೆ, ಬಂಡವಾಳ ವೆಚ್ಚವು ಧನಾತ್ಮಕ ಪರಿಣಾಮ ಬೀರಿದೆ. ಇದೇ ವೇಳೆ, ಸಾಮಾನ್ಯ ಸರ್ಕಾರದ ಒಟ್ಟು ಆದಾಯಗಳು ಕೂಡ ಹೆಚ್ಚಾಗಿವೆ. ಬಂಡವಾಳ ಆದಾಯದ ಹೆಚ್ಚಳವು ರಾಜ್ಯ ಸರ್ಕಾರಗಳಿಗಿಂತ ಕೇಂದ್ರ ಸರ್ಕಾರದಲ್ಲಿ ಹೆಚ್ಚು ಏರಿಕೆ ಕಂಡುಬಂದಿದೆ. ಒಟ್ಟು ವೆಚ್ಚವು ಒಟ್ಟು ಆದಾಯಕ್ಕಿಂತ ಹೆಚ್ಚು ಇರುವುದರಿಂದ, ಒಟ್ಟು ಕೋಶೀಯ ಕೊರತೆ (Gross Fiscal Deficit) ಹೆಚ್ಚಾಗಿದೆ. ಈ ಏರಿಕೆ ರಾಜ್ಯ ಸರ್ಕಾರಗಳಿಗಿಂತ ಕೇಂದ್ರ ಸರ್ಕಾರದಲ್ಲಿ ಹೆಚ್ಚು ಕಂಡುಬಂದಿದೆ. ಆದರೆ, ಈ ಕಾಯ್ದೆ ಜಾರಿಗೆ ಬಂದನಂತರ ಸಾರ್ವಜನಿಕ ಸಾಲದ ಬೆಳವಣಿಗೆ ದರವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಸ್ವಲ್ಪ ಮಟ್ಟಿಗೆ ಕುಂಠಿತವಾಗಿದೆ. ಆದರೆ ಸಾರ್ವಜನಿಕ ಸಾಲವು ದೇಶದ ಜಿಡಿಪಿ ಮೇಲೆ ನಕಾರಾತ್ಮಕವಾದ ಪರಿಣಾಮ ಬೀರಿದೆ. ಅಲ್ಲದೆ ಕಾಯ್ದೆ ಜಾರಿಯಾದ ನಂತರ ಕೇಂದ್ರ ಮತ್ತುರಾಜ್ಯ ಸರ್ಕಾರಗಳ ಕೋಶೀಯ ಶಿಸ್ತಿನಲ್ಲಿ ಸುಧಾರಣೆ ಕಂಡುಬಂದಿದೆ. ಈ ಸುಧಾರಣೆ ರಾಜ್ಯ ಸರ್ಕಾರಗಳಿಗಿಂತ ಕೇಂದ್ರ ಸರ್ಕಾರದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಂಡುಬಂದಿದೆ.

ಇದರಿಂದ, ಕೇಂದ್ರ ಸರ್ಕಾರವು ಬಂಡವಾಳ ವೆಚ್ಚದ ಕಡೆ ಹೆಚ್ಚು ಗಮನಹರಿಸಿ, ಸಾಲದ ಅವಲಂಬನೆಯನ್ನು ಕಡಿಮೆ ಮಾಡಿ, ಆರ್ಥಿಕ ಉತ್ಪಾದಕತೆಯನ್ನು ಹೆಚ್ಚಿಸುವ ದಿಶೆಯಲ್ಲಿ ಸಾಗುತ್ತಿದೆ ಎಂಬುದು ತಿಳಿದುಬರುತ್ತದೆ. ಅಧ್ಯಯನವು ಸೂಚಿಸುವುದೇನೆಂದರೆ ಅನುತ್ಪಾದಕ ವೆಚ್ಚವನ್ನು ಕಡಿಮೆ ಮಾಡಬೇಕು, ಬಂಡವಾಳ ವೆಚ್ಚವನ್ನು ಹೆಚ್ಚಿಸಬೇಕು, ಸಾಲ ಪಡೆದ ಹಣವನ್ನು ವೇತನ, ಪಿಂಚಣಿ, ಫ್ರೀಬೀಜ್ ಯೋಜನೆಗಳು, ಸಾಮಾಜಿಕ ಭದ್ರತಾ

ಸೇವೆ ಮುಂತಾದವುಗಳ ಮೇಲೆ ವೆಚ್ಚಮಾಡುವ ಬದಲು ಉತ್ಪಾದಕ ಆಸ್ತಿಗಳ ನಿರ್ಮಾಣಕ್ಕೆ ಬಳಸಬೇಕು. ಮೇಲ್ಕಂಡ ಸಲಹೆಗಳನ್ನು ಅನುಷ್ಠಾನಗೊಳಿಸಿದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಣಕಾಸು

ಆರೋಗ್ಯ ಮತ್ತು ಶಿಸ್ತಿನಲ್ಲಿ ಇನ್ನಷ್ಟು ಸುಧಾರಣೆ ಆಗುತ್ತದೆ ಮತ್ತು 2047ರೊಳಗೆ "ವಿಕಸಿತ ಭಾರತ" ಎಂಬ ಕನಸು ನನಸಾಗಲು ನೆರವಾಗುತ್ತದೆ. ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ ಬಟ್ಟು

ಸತ್ಯನಾರಾಯಣ, ಸಿಎಂಡಿಆರ್ ಧಾರವಾಡದ ನಿರ್ದೇಶಕ ಪ್ರೊ ಬಸವಪ್ರಭು ಜಿರ್ಲಿ ಮತ್ತು ಅವರ ಸಂಶೋಧನಾ ಮಾರ್ಗದರ್ಶಕರಾದ ಪ್ರೊ ನಯನತಾರ ಎಸ್. ನಾಯಕ್ ಅವರು ಪ್ರೊ. ಬಿರಾದಾರವರಿಗೆ ಅವರ ಆಡಳಿತ ಜವಾಬ್ದಾರಿಗಳ ಮಧ್ಯೆದಲ್ಲಿಯೂ ಮಾಡಿದ ಶೈಕ್ಷಣಿಕ ಸಾಧನೆ ಮತ್ತು ಸಂಶೋಧನೆಗೆ ಅಭಿನಂದನೆ ಸಲ್ಲಿಸಿದ್ದಾರೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE